International Journal of Kannada Research 2021; 7(1): 31-37




International Journal of Kannada Research
www.kannadajournal.com

**ISSN: 2454–5813**
IJKR 2021; 7(1): 31-37
© 2021 IJKR
www.kannadajournal.com
Received: 24-11-2020
Accepted: 27-12-2020

**ವೆಂಕೋಬರಾವ್.ಎಂ**
ಕನ್ನಡ ಸಂಶೋಧಕ, ಜೈನ್ ಡೀಮ್ಡ್ - ತು-ಬಿ- ವಿಶ್ವವಿದ್ಯಾಲಯ, ಬೆಂಗಳೂರು, ಕರ್ನಾಟಕ, ಭಾರತ

**ಡಾ. ಮಂಜುನಾಥ**
ಮುಖ್ಯಸ್ಥರು, ಪ್ರಾಧ್ಯಾಪಕರು, ಕನ್ನಡ ಇಲಾಖೆ, ಜೈನ್ ಡೀಮ್ಡ್-ಟು-ಬಿ ವಿಶ್ವವಿದ್ಯಾಲಯ, ಬೆಂಗಳೂರು, ಕರ್ನಾಟಕ, ಭಾರತ

**Corresponding Author:**
**ವೆಂಕೋಬರಾವ್.ಎಂ**
ಕನ್ನಡ ಸಂಶೋಧಕ, ಜೈನ್ ಡೀಮ್ಡ್ - ತು-ಬಿ- ವಿಶ್ವವಿದ್ಯಾಲಯ, ಬೆಂಗಳೂರು, ಕರ್ನಾಟಕ, ಭಾರತ

# ಕನ್ನಡ ಸಾಹಿತ್ಯ ಸಮ್ಮೇಳನಗಳು: ಮಹಿಳಾ ಚಿಂತನೆಗಳು

**ವೆಂಕೋಬರಾವ್.ಎಂ, ಡಾ. ಮಂಜುನಾಥ**

**ಪ್ರಸ್ತಾವನೆ:**

ಓ ಎಳೆಯಿರೋ ಕನ್ನಡದ ತೇರ
ನೀವು ನಿಂತಿರುವಂಥ ನೆಲೆಗಳಿಂದ
ನಾವೆಲ್ಲರೂ ಒಂದು : ತೇರೆಳೆವ ಜನರು :
ಆ ಊರೊ, ಈ ಊರೊ ಹಿಂದೆಯೊ ಮುಂದೆಯೊ,
ಎಲ್ಲಿಯೊ ಒಂದು ಕಡೆ ಕೈ ಹಾಕಿ
* ಜಿ.ಎಸ್. ಶಿವರುದ್ರಪ್ಪ

ಈ ಕವಿವಾಣಿಯಂತೆ, ಕನ್ನಡ ಸಾಹಿತ್ಯ ಸಮ್ಮೇಳನಗಳಲ್ಲಿ ಮಹಿಳಾ ಚಿಂತಕಿಯರು ಮನದಂದು, ಕನ್ನಡ ರಥವನ್ನು ಉತ್ಸಾಹದಿಂದ ವಿಶಾಲಪಥದಲ್ಲಿ ಮುನ್ನಡೆಸುತ್ತಾ ಬಂದಿದ್ದಾರೆ. ಮೊದಲ ಬಾರಿಗೆ ೧೯೭೪ರಲ್ಲಿ ಮಂಡ್ಯದಲ್ಲಿ ನಡೆದ ೪೮ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿ ಶ್ರೀಮತಿ. ಜಯದೇವಿತಾಯಿ ಲಿಗಾಡೆ ಅವರು ಆಯ್ಕೆಗೊಂಡರು, ಕನ್ನಡದ ಕವಿಯಿತ್ರಿಯಾಗಿ ಅವರು ಬರೆದ 'ಸಿದ್ದರಾಮೇಶ್ವರ ಪುರಾಣ' ಕೃತಿಗೆ ೧೯೭೮ರಲ್ಲಿ ರಾಜ್ಯ ಸಾಹಿತ್ಯ ಅಕಾಡಮಿ ಪ್ರಶಸ್ತಿ ಸಂದಿದೆ. ಅಖಿಲ ಭಾರತ ೬೮ನೆಯ ಕನ್ನಡ ಸಾಹಿತ್ಯ ಸಮ್ಮೇಳನವು ಬಾಗಲ ಕೋಟೆಯಲ್ಲಿ ಶ್ರೀಮತಿ ಶಾಂತದೇವಿ ಮಾಳವಾಡ ಅವರ ಅಧ್ಯಕ್ಷತೆಯಲ್ಲಿ ಜೂನ್ ೨೦೦೦ರಂದು ಜರುಗಿತು. ೧೯೭೭ರಲ್ಲಿ ಕನ್ನಡ ಸಾಹಿತ್ಯ ಅಕಾಡೆಮಿಯ ಗೌರವ ಪ್ರಶಸ್ತಿಯು ಇವರ ಸಾಹಿತ್ಯ ಸಾಧನೆಯ ಫಲವಾಗಿ ಲಭಿಸಿದೆ. ಅಖಿಲ ಭಾರತ ೭೧ನೇ ಕನ್ನಡ ಸಾಹಿತ್ಯ ಸಮ್ಮೇಳನವು ೨೦೦೩ ರಲ್ಲಿ ಜರುಗಿತು ಇದರ ಅಧ್ಯಕ್ಷತೆಯನ್ನು ಡಾ. ಕಮಲಾಹಂಪನಾವಹಿಸಿದ್ದರು. ಸ್ತ್ರೀ ಸಂವೇದನೆಗೆ ಸಂಬಂಧಿಸಿದಂತ ಸಂಶೋಧನಾ ಲೇಖನಗಳನ್ನು ಬರೆದಿದ್ದಾರೆ. ೧೯೮೫ರಲ್ಲಿ ರಾಜ್ಯ ಸಾಹಿತ್ಯ ಅಕಾಡಮಿ ಪ್ರಶಸ್ತಿಗೆ ಪಾತ್ರರಾಗಿದ್ದಾರೆ ೭೬ನೇ ಕನ್ನಡ ಸಾಹಿತ್ಯ ಸಮ್ಮೇಳನಾಧ್ಯಕ್ಷತೆಯನ್ನು ಡಾ. ಗೀತಾ ನಾಗಭೂಷಣ ಅವರು ೨೦೧೦ ವಹಿಸಿಕೊಂಡಿದ್ದರು. ಇವರು ಬರೆದ 'ಬದುಕು' ಕಾದಂಬರಿಗೆ ಕೇಂದ್ರ ಸಾಹಿತ್ಯ ಅಕಾಡಮಿ ಪ್ರಶಸ್ತಿಗೆ ಭಾಜನವಾಗಿದೆ. ಕನ್ನಡ ಸಾಹಿತ್ಯ ಸಮ್ಮೇಳನಗಳಲ್ಲಿ ಮಹಿಳಾ ಲೇಖಕಿಯರು, ಮಹಿಳಾ ಸುತ್ತಮುತ್ತ; ಪರಿಭಾವನೆ, ಕನ್ನಡ, ಕನ್ನಡಿಗ, ಕರ್ನಾಟಕದ ಚಿಂತನೆ ಕನ್ನಡ ಭಾಷೆ ಮತ್ತು ಸಾಹಿತ್ಯ, ಶಿಕ್ಷಣ ಮತ್ತು ತಂತ್ರಜ್ಞಾನಗಳ ಕೇಂದ್ರ ಪ್ರಜ್ಞೆಯನ್ನಿರಿಸಿಕೊಂಡು ಅನುಭವಾತ್ಮಕ ತಮ್ಮ ನಿಲುವುಗಳನ್ನು ಹೊರಹಾಕಿರುವುದನ್ನು ಗಮನಿಸಬಹುದು.

**೧. ಮಹಿಳಾ ಸಂವೇದನೆಯ ಸುತ್ತ ಮುತ್ತ : ಪರಿಭಾವನೆ :**

ಶ್ರೀಮತಿ ಜಯದೇವಿ ತಾಯಿ ಲಿಂಗಾಡೆ ಅವರು ತಮ್ಮ ಭಾಷಣದಲ್ಲಿ, ನಮ್ಮ ದೇಶದಲ್ಲಿ ೧೦೦%ಕ್ಕೆ ೮% ರಿಂದ ೧೦%ರಷ್ಟು ಮಹಿಳೆಯರು ವಿದ್ಯಾವಂತರಿದ್ದಾರೆ. ಅವರಲ್ಲಿ ಅಕ್ಷರ ಬಡತನವಿದೆ. ಹೆಣ್ಣು ಮಕ್ಕಳು ಭಾವುಕರು, ಭಾವನೆಯೇ ಜೀವನವೆಂದು ನಂಬಿ, ಜೀವನದ ವಿವಿಧ ಮಜಲುಗಳಲ್ಲಿನ ಅನುಭವಗಳು, ಘಟನೆಗಳು ಮತ್ತು ತೀವ್ರತೆ, ಸಂವೇದನಾಶೀಲತೆಯನ್ನು ತಮ್ಮದಾಗಿಸಿಕೊಂಡಿದ್ದಾರೆ. ಕನ್ನಡ ತಾಯಂದಿರು ಕಾವ್ಯಪ್ರಚಾರವನ್ನು ಬಡಮಾಡಿಸಿಕೊಂಡು ಸಮರ್ಥರಾಗಿ ಕಾವ್ಯ ರಚನೆ ಮಾಡತೊಡಗಿದರು ಉದಾಹರಣೆಗೆ.

"ಹೆಣ್ಣೀನ ಜನುಮಕ ಅಣ್ಣ ತಮ್ಮರು ಬೇಕ
ಬೆನ್ನು ಕಟ್ಟುವರು ಸಭೆಯೊಳಗ–ಸಾವಿರದ
ಹೊನ್ನು ಕಟ್ಟುವರು ಉಡಿಯೊಳಗ"

"ಹೆಣ್ಣು ಹುಟ್ಟೇದಂತೆ ಕಣ್ಣೀರ ಕರಿಬೇಡ
ಸಣ್ಣಾಗಬೇಡ ಮನದಾಗ – ತಾಯವ್ವ
ಹೆಣ್ಣೀನ ಜನದ ಕಣ್ಣೀನ"

ಮಹಿಳೆಯರು ತಮಗೆ ದೊರೆತ ಸದಾವಕಾಶಗಳು ಮತ್ತು ಸಮಯ ವ್ಯರ್ಥಮಾಡಬಾರದು, ಕಥೆ ಕಾದಂಬರಿ ಮತ್ತು ಜನಪದ ಹಾಡು ಮೊದಲಾದ ರಚನೆಗಳಲ್ಲಿ ಮಹಿಳಾ ಲೇಖಕಿಯರು ತೊಡಗುವುದು.

ಎತ್ತಾರ ನೀವೆಲ್ಲ ಹೊತ್ತೆಂಗ ಹಾಕುವಿರಿ
ಚಿತ್ತರದ ಗೊಂಬೀಯು ಕುಂತಂಗ–ಕುಂತರ
ಹೊತ್ತ ಜನವು ವ್ಯರ್ಥವು.

ಜನಪದ ಸಾಹಿತ್ಯದ ಉಳಿವಿಗಾಗಿ ಮಹಿಳೆಯರು ಜನಪದ ಸಂಗ್ರಹಣಕಾರ್ಯ, ಅನುಭಾವದ ಹಾಡುಗಳು, ಮುಂತಾದ ಹೊಸ ಲೋಕದೆಡೆ ಕಾರ್ಯಪ್ರವೃತ್ತರಾಗಬೇಕೆಂದಿದ್ದಾರೆ.
ಶ್ರೀಮತಿ ಶಾಂತಾದೇವಿ ಮಾಳವಾಡ ಅವರು ತಮಗೆ ಸಿಕ್ಕ ಅವಕಾಶದ ಹಿಂದೆ ಇರುವ ಪುರುಷ ಸಮಾಜವನ್ನು ನೆನೆಯುತ್ತಾ,

"ಹೆಣ್ಣೀನ ಜನುಮಕ ಅಣ್ಣತಮ್ಮರು ಬೇಕ
ಹೊನ್ನ ಕಟ್ಟುವರು ಉಡಿಯೊಳಗ
ಬೆನ್ನ ಕಟ್ಟುವರು ಸಭೆಯೊಳಗ" ಎಂದಿದ್ದಾರೆ.

ಇಂದು ವೈದ್ಯರು, ಶಿಕ್ಷಕಿಯರು, ವಕೀಲಿ ವೃತ್ತಿ ಹಾಗೂ ಉದ್ಯೋಗಸ್ಥ ಮಹಿಳೆಯರನ್ನು ಗಮನಿಸುತ್ತಿರುವುದು ಸಂತಸತಂದಿದೆ. ಪಂಪನಿಂದ, ಮುದ್ದಣ್ಣನವರೆಗಿನ ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ಹೆಣ್ಣಿನ ಆತ್ಮಶ್ರೀಯನ್ನು ಬೆಳಗಿಸಿದ ಅನೇಕ ಸ್ತ್ರೀ ಚೇತನಗಳು ಕಂಗೊಳಿಸಿದ್ದಾರೆ. ಮಹಾಶಿವಶರಣೆ ಮಹಾದೇವಿಯಕ್ಕ, ವಚನಕಾರ್ತಿಯರು, ಮತ್ತು ಸಂಚಿಹೊನ್ನಮ್ಮರನ್ನು ಕಾಣಬಹುದು. ಜಯದೇವಿ ತಾಯಿ ಲಿಗಾಡೆ, ಶ್ರೀಮತಿ ಮಲ್ಲಿಕಾ ಕಡಿದಾಳ ಮೊದಲಾದವರು ಕನ್ನಡದಲ್ಲಿ ಮಹಾಕಾವ್ಯಗಳನ್ನು ರಚಿಸಿ, ಕನ್ನಡಕ್ಕೆ ಅಭೂತಪೂರ್ವ ಮನ್ನಣೆ ತಂದಿದ್ದಾರೆ. ಮಹಿಳಾ ಸಾಹಿತ್ಯವು ಕಾವ್ಯ–ನಾಟಕ–ವಿಮರ್ಶೆ–ಸಂಶೋಧನೆ–ಪ್ರಬಂಧ–ಪ್ರವಾಸ–ಮಕ್ಕಳ ಸಾಹಿತ್ಯ ಅನುವಾದ ಹೀಗೆ ಹಲವು ಸಾಹಿತ್ಯ ಪ್ರಕಾರಗಳಲ್ಲಿ ಸಾವಿರಾರು ಕೃತಿಗಳನ್ನು ನೀಡಿವೆ. ಇತ್ತೀಚಿನ ದಿನಗಳಲ್ಲಿ ಸ್ತ್ರೀವಾದಿ ಸಾಹಿತ್ಯ ಮತ್ತು ಚಿಂತನೆ ಪ್ರಾಮುಖ್ಯತೆ ಪಡೆಯುತ್ತಾ ಬಂದಿದೆ. ಮಹಿಳಾ ಸಾಹಿತ್ಯವು ವೈವಿಧ್ಯಮಯವಾಗಿ ರಚನೆಯಾಗಿದ್ದರೂ, ಅದರ ವಿಮರ್ಶೆ ಮತ್ತು ಮೌಲ್ಯಮಾಪನ ಸೂಕ್ತ ರೀತಿಯಲ್ಲಿ ಆಗಿಲ್ಲವೆಂದಿದ್ದಾರೆ. ಕನ್ನಡ ಲೇಖಕಿಯರು ಪುರುಷ ಪ್ರಧಾನ ಸಂಸ್ಕೃತಿಯನ್ನು ವಿರೋಧಿಸುವ ಜೊತೆ ಜೊತೆಗೆ ತಮ್ಮಲ್ಲಿರುವ ಪ್ರತಿಭೆ, ಸೃಷ್ಟ್ಯಾತ್ಮಕಶಕ್ತಿ, ಸೃಜನಶೀಲ ಸಂವೇದನೆಯನ್ನು ಕನ್ನಡ ಸಾಹಿತ್ಯದಲ್ಲಿ ಪರಿಣಾಮಕಾರಿಯಾಗಿ ಅಭಿವ್ಯಕ್ತಿಸಿದ್ದಾರೆ.
ಇಪ್ಪತ್ತನೇಯ ಶತಮಾನವು ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ಮಹಿಳಾ ಸಾಹಿತ್ಯದ ಸುವರ್ಣಯುಗ. ಕನ್ನಡದ ಮೊದಲ ಲೇಖಕಿ ತಿರುಮಲಾಂಬಾ ರಿಂದ ಮೊದಲಾಗಿ, ಇತ್ತೀಚಿನ ಲೇಖಕಿಯರಾದ ಬಿ.ಟಿ.ಲಲಿತಾನಾಯಕ, ಮಲ್ಲಿಕಾಘಂಟಿ, ನೇಮಿಚಂದ್ರ, ಕಮಲಾಹೆಮ್ಮಿಗೆ, ವಿಜಯಶ್ರೀಸಬರದ, ಚೆನ್ನಕ್ಕ ಪಾವಟೆ, ಎಚ್.ಎಂ.ಬಿಳಗಿ, ಮೊದಲಾದವರೊಂದಿಗೆ ಸಾವಿರ–ಸಾವಿರ ಸಂಖ್ಯೆಯಲ್ಲಿ ಆಧುನಿಕ ಲೇಖಕಿಯರು ಮಹಿಳಾ ಸಾಹಿತ್ಯದ ಬೆಳವಣಿಗೆಯ ದ್ಯೋತಕವೆನಿಸಿದ್ದಾರೆ. 'ಅಖಿಲ ಕರ್ನಾಟಕ ಲೇಖಕಿಯರ ಸಂಘ' 'ಉತ್ತರ–ಕರ್ನಾಟಕದ ಲೇಖಕಿಯರ ಸಂಘ' ಹುಬ್ಬಳ್ಳಿಯ 'ಮಹಿಳಾ ಸಾಹಿತ್ಯಿಕಾ' ಪ್ರಕಾಶನ ಸಂಸ್ಥೆಗಳು ಅನುಪಮವಾದ ಸೇವೆ ಸಲ್ಲಿಸುತ್ತಿವೆ. ನನ್ನಂತಹ ಲೇಖಕಿಯರು ಸ್ವಂತಅಭ್ಯಾಸ, ಪರಿಶ್ರಮದಿಂದ ಬರವಣಿಗೆ ಮಾಡಬೇಕಾಗಿತ್ತು. ಆದರೆ ಈ ಕಾಲದ ಕನ್ನಡದ ಲೇಖಕಿಯರು ಜ್ಞಾನ–ವಿಜ್ಞಾನ–ತಂತ್ರಜ್ಞಾನ–ಮಾನವಶಾಸ್ತ್ರ ಮತ್ತು ಸಮಾಜಶಾಸ್ತ್ರಗಳ ಅಧ್ಯಯನದಿಂದ ಮೂಲಭೂತ ಸಮಸ್ಯೆಗಳನ್ನು ಅರಿತುಕೊಂಡು ಆ ಅನುಭವಗಳನ್ನು ಸಾಹಿತ್ಯದಲ್ಲಿ ಪ್ರತಿಬಿಂಬಿಸಲು ಸಾಧ್ಯವಾಗಿದೆ. ದೇಶ–ವಿದೇಶಗಳಿಗೆ ಸಂಚರಿಸುತ್ತಾ, ಅಲ್ಲಿನ ಅಪಾರ ಅನುಭವ ವಿಸ್ತಾರವನ್ನು ಸಾಹಿತ್ಯದ ಮುಖೇನಾ ಪ್ರಕಟಿಸುತ್ತಿದ್ದಾರೆ. ಇತ್ತೀಚೆಗೆ ಸ್ತ್ರೀವಾದಿ ಸಾಹಿತ್ಯದ ವಿಚಾರ ಕೇಳಿಬರುತ್ತಿದ್ದು, ಸ್ತ್ರೀಪುರುಷರ ನಡುವೆ ಸಮಾನತೆ, ಸಮನ್ವಯ ಮತ್ತು ಅರ್ಥಪೂರ್ಣವಾದ ಸಂವಾದಗಳು ನಡೆದು ಸಾಹಿತ್ಯದ ಮೂಲಕ ಮನುಕುಲದ ಕಲ್ಯಾಣವಾಗಬೇಕು. ಮಹಿಳೆಯರಿಗೆ ಮಹಿಳೆಯಿಂದ, ಪುರುಷರಿಂದ ಯಾವುದೇ ರೀತಿಯ ಶೋಷಣೆಯಾಗಬಾರದು. ಸ್ತ್ರೀಪರವಾದದ ಎಲ್ಲಾ ವಿಚಾರ ಸಿದ್ಧಾಂತ ತತ್ವಗಳನ್ನು ಬೆಂಬಲಿಸುತ್ತೇನೆ. ವರದಕ್ಷಿಣೆ ಸಮಸ್ಯೆ, ದೇವದಾಸಿ ಪದ್ಧತಿಗಳುನಿಲ್ಲಬೇಕು, ಅಂಧಶ್ರದ್ಧೆಯಿಂದ ಹೆಣ್ಣಿನ ಶೋಷಣೆಯಾಗುವುದನ್ನು ತಡೆಯಬೇಕು. ಜಾಹೀರಾತು, ಭಿತ್ತಿಪತ್ರ, ವಿಶ್ವಸುಂದರಿಸ್ಪರ್ಧೆ, ಮುಂತಾದವುಗಳಲ್ಲಿ ಹೆಣ್ಣನ್ನು ಪ್ರಚಾರಕ್ಕಾಗಿ ಬಳಸಿಕೊಳ್ಳುತ್ತಿರುವುದು ಸರಿಯಲ್ಲ ! ವಚನಕಾರರು ಹೇಳಿದಂತೆ 'ನಾರಿಗೆ ಗುಣವೇ ಶೃಂಗಾರ' ಎಂಬ ಮಾತನ್ನು ಗಮನದಲ್ಲಿರಿಸಿಕೊಳ್ಳಬೇಕು ಸ್ತ್ರೀಶಕ್ತಿಯ ಜಾಗೃತಿಯ ಅವಶ್ಯಕವಿದ್ದು, ಕನ್ನಡ ಲೇಖಕಿಯರು ರಚಿಸಿದ ಸಾಹಿತ್ಯಕ್ಕೆ ವಿಮರ್ಶಕರ ಗುಣಮನ್ನಣೆ ಸಮಪ್ರಮಾಣದಲ್ಲಿ ದೊರೆಯಬೇಕಿದೆ ಎಂದು ಶ್ರೀಮತಿ ಶಾಂತದೇವಿಮಾಳವಾಡ ಅವರು ಅಭಿಪ್ರಾಯ ಪಡುತ್ತಾರೆ.

ಕನ್ನಡ ಸಾಹಿತ್ಯ ಲೋಕದಲ್ಲಿ ಸ್ತ್ರೀವಾದಿಯೆಂಬ ತಸ್ಸೆ ಒತ್ತಿಸಿಕೊಂಡ ಡಾ. ಕಮಲ ಹಂಪನಾ ಅವರು ಮಾತನಾಡುತ್ತಾ 'ಮಹಿಳೆಯರ ಪರವಾಗಿ ಮುಂದೆನಿಂತು ಮಾತನಾಡುವುದು ನನಗೆ ದಣಿವರಿಯದ ಪ್ರಿಯವಾದ ಕಾಯಕ' ಆದರಿಂದು ಹೆಣ್ಣು ಭ್ರೂಣ ಹತ್ಯೆ ವ್ಯವಸ್ಥಿತವಾಗಿ ಮುಂದುವರೆದಿರುವುದು ಶೋಚನಿಯ ! ಹೆಣ್ಣು, ಹೆಣ್ಣಿಗೆ ಶತ್ರುವಾಗದೆ, ಕೀಳಾಗಿ ಕಾಣುವ ಕೀಳರಿಮೆ ಮೈಗೂಡಿಸಿಕೊಳ್ಳದೇ, ಸಂಘಟಿತರಾಗಿ ಆತ್ಮಸ್ಥೈರ್ಯ ಹೆಚ್ಚಿಸಿಕೊಳ್ಳಬೇಕು. ಕಳೆದ ಮೂರು ದಶಕಗಳಿಂದ ಈಚೆಗೆ ಸ್ತ್ರೀಪರವಾದ ಹೋರಾಟ ಹುರಿಗೊಳ್ಳುತ್ತಿದೆ. ವಿದೇಶಗಳಲ್ಲಿ ಸ್ತ್ರೀಯ ಶೋಷಣೆಯು ಅವ್ಯಾಹತವಾಗಿ ನಡೆದಿದೆ. ಅಲ್ಲಿ ಹೆಣ್ಣಿಗೆ ಸರಿಸಮಾನ ಸ್ಥಾನಮಾನ ಸಿಗಬೇಕೆಂಬ ಹೋರಾಟ ದಟ್ಟವಾಗಿದೆ. ಅಲ್ಲಿನ ಸ್ತ್ರೀಯು ಆರ್ಥಿಕವಾಗಿ ಸಬಲತೆ ಹೊಂದಿದ್ದಾರೆ. ಇಂದಿನ ಲೇಖಕಿಯರ ಬರೆಹಗಳು ನಿಚ್ಚಳವಾಗಿ ಗುಣಾತ್ಮಕವಾಗಿ, ಮೌಲಿಕವಾಗುತ್ತಿರುವುದನ್ನು ಗಮನಿಸಬಹುದು. ಆದರೆ ಮಹಿಳಾ ಸಾಹಿತ್ಯಕ್ಕೆ ಸಿಗಬೇಕಾದ ಮನ್ನಣೆ, ಪುರಸ್ಕಾರ ಸಿಕ್ಕಿಲ್ಲ. ಬದುಕಿನ ಎಲ್ಲಾ ಕ್ಷೇತ್ರಗಳಲ್ಲಿಂದು ಸ್ತ್ರೀಯು ಸ್ವಾಭಿಮಾನಿಯಾಗಿ, ಜಾಗೃತಳಾಗಿದ್ದಾಳೆ, ಆಕೆ ಮಹಿಳೆಯೆಂಬ ರಿಯಾಯಿತಿ ಅಥವಾ ಸಹಾನುಭೂತಿ ಬೇಡವೆಂದು ಹೇಳುವ ಸ್ಥಿತಿಯಲ್ಲಿದ್ದಾಳೆ. ಸಾಹಿತ್ಯದಲ್ಲಿಂದು ಲಿಂಗ ಭೇದ ಆಧಾರಿತ ತಾರತಮ್ಯವನ್ನೂ ವಿರೋಧಿಸಬೇಕು. "ಅರ್ಹತೆಯಿಂದಲೇ ಸೋಪಾನಗಳನ್ನೇರಿ ಎತ್ತರಗಳನ್ನು ಎಟುಕಿಸುವ ಆರೋಗ್ಯಕರಧೋರಣೆ ಶ್ಲಾಘ್ಯವಾದುದು" ಲೇಖಕಿಯರಿಂದು ಪ್ರಾದೇಶಿಕ ಹಾಗೂ ರಾಷ್ಟ್ರೀಯ ತುರ್ತುಗಳಿಗೆ ಸ್ಪಂದಿಸುತ್ತಾ, ಎಲ್ಲ ಪರಿಮಿತ ಒತ್ತಡಗಳನ್ನು ಮೀರಿ ಜಾಗತಿಕ ಎತ್ತರಗಳಿಗೆ ಎಟುಕಬೇಕು. ಸಮಸ್ತ ಮನುಷ್ಯರ ಪರವಾಗಿ ನಿಂತು

ಎಲ್ಲ ರೀತಿಯಿಂದ ಶೋಷಣೆಯನ್ನೂ, ಸವಾಧಿಕಾರವನ್ನೂ, ತುಳಿತವನ್ನೂ ಧಿಕ್ಕರಿಸಬೇಕು. ಕಳೆದ ಎರಡು ದಶಕಗಳಿಂದ ಮಹಿಳಾ ಲೇಖಕಿಯರು ಬಟ್ಟೆಯ ತುದಿಗಳಲ್ಲಿ ಅಲಂಕಾರಕ್ಕೆ ಇಳಿಯಬಿಟ್ಟ ಬಣ್ಣದ ಎಳೆಗಳಂತೆ (ಅಂಚಿನಂತೆ) ಲೇಖಣಿಯನ್ನು ಹಿಡಿದಿದ್ದಾರೆ. ಈ ಶತಮಾನದ ಬರೆಹಗಾರ್ತಿಯರು, ಸಾಮಾಜಿಕ, ಸಾಂಸ್ಕೃತಿಕ, ಆರ್ಥಿಕ, ಶ್ರೇಷ್ಠ ಕಲಾಕೃತಿಯಾಗಿಸಿದ್ದಾರೆ. ಆಧುನಿಕತೆಯಲ್ಲಿಂದು ಚಾಲ್ತಿಯಲ್ಲಿರುವ ಜಾಹಿರಾತು ಲೋಕದ ಪಾಪದ ಮುಖದಲ್ಲಿ, ಮಹಿಳೆಯರು ಮಾರಾಟದ ಸರಕು ಎಂಬಂತೆ ಬಿಂಬಿತವಾಗಿರುವುದು ಶೋಚನಿಯವಾದುದು. ಕೀಳಾಗಿ ಕಾಣಿಸುವ ಈ ದುರ್ಬಳಕೆಯನ್ನು ನಿಯಂತ್ರಿಸಲು ಜಾಹಿರಾತು ನೀತಿ ಸಂಹಿತೆಯನ್ನು ಜಾರಿಗೆ ತರಬೇಕು. ಮಾನವೀಯ ಘನತೆಯನ್ನು ಮಾನ್ಯಮಾಡಿ ಸ್ತ್ರೀ-ಪುರುಷರೆಂಬ ತಾರತಮ್ಯಗಳಿಲ್ಲದೆ, ಮಾನವತೆಯ ಮಣೆಯ ಮೇಲೆ ನಿಲ್ಲಿಸುವ ವಿವೇಕ ಆಳಬೇಕು.

ಮಹಿಳೆಯು ಹಿಂದುಳಿದವರಲ್ಲಿ ಬಹು ಹಿಂದುಳಿದವಳು, ಶೋಷಿತರಲ್ಲಿ ಬಹು ಶೋಷಿತಳು, ಸಾಮಾಜಿಕವಾಗಿ, ಧಾರ್ಮಿಕವಾಗಿ ಮತ್ತು ಆರ್ಥಿಕವಾಗಿ ಸದೃಢವಾದ ಕುಟುಂಬ, ಸಮಾಜಗಳಲ್ಲಿ ಮಹಿಳೆಯು ಎರಡನೆಯ ಸಾಲಿನಲ್ಲಿದ್ದಾಳೆ, ಶೋಷಣೆ ನಿರಂತರ ನಡೆದಿದೆ, ಮಕ್ಕಳು ಶಿಕ್ಷಣ ಸೌಲಭ್ಯದಿಂದ ವಂಚಿತರಾಗಿದ್ದಾರೆ. ಲೈಂಗಿಕ ಕಿರುಕುಳ ಹಾಗೂ ಕೌಟುಂಬಿಕ ಕಲಹಗಳಿಗೆ ಮೀಸಲಾದ ಕಾನೂನನ್ನು ಸಾಮಾಜಿಕ, ಮಾನಸಿಕ ದೃಷ್ಠಿಯಿಂದ ವಿಶ್ಲೇಷಿಸುವತ್ತಾ, ಕಾರ್ಯವಿಧಾನವನ್ನು ಅಳವಡಿಸಿಕೊಂಡು ಮಹಿಳಾಆಯೋಗ ಸಶಕ್ತವಾಗಬೇಕು. ಹೆಣ್ಣಿಗೆ ಸ್ವಾಭಿಮಾನದ ಹಸಿವು ಮುಖ್ಯವೆನಿಸಿದೆಯೆಂಬ ಅರಿವು ಪುರುಷರಲ್ಲಿ ಉಂಟಾಗಿ ಸಹಕರಿಸುತ್ತಿದ್ದಾರೆ. 'ಮಹಿಳಾ ಮೀಸಲಾತಿ ಮಸೂದೆ' ಸಶಕ್ತವಾಗಬೇಕು. ಹೆಣ್ಣಿಗೆ ಸ್ವಾಭಿಮಾನದ ಹಸಿವು ಮುಖ್ಯವೆನಿಸಿದೆಯೆಂಬ ಅರಿವು ಪುರುಷರಲ್ಲಿ ಉಂಟಾಗಿ ಸಹಕರಿಸುತ್ತಿದ್ದಾರೆ. 'ಮಹಿಳಾ ಮೀಸಲಾತಿ ಮಸೂದೆ'ಯನ್ನು ಲೋಕಸಭಾ ಸದಸ್ಯರು ಮುಂದೂಡುತ್ತಿರುವುದು ದುರಂತ. ರಾಜಕೀಯ ಇಚ್ಛಾಶಕ್ತಿ ಮಹಿಳಾಪರ ಧೋರಣೆಗೆ ಒಗ್ಗೊಟ್ಟು ಬೇಗ ಸ್ಪಂದಿಸಿದರೆ, ಸ್ತ್ರೀ ಶಕ್ತಿಯ ಸಂಘಟನೆಗೆ ಸಿಂಹಬಲ ಬರುತ್ತದೆ. ೧೯೭೫ರಲ್ಲಿ ಕನ್ನಡ ಅಧ್ಯಯನ ಸಂಸ್ಥೆ ನಡೆಸಿದ 'ಲೇಖಕಿಯರ ಸಮ್ಮೇಳನ'ದಲ್ಲಿ "ಸ್ತ್ರೀಯರ ಲೇಖನಕ್ಷೇತ್ರದ ಹಸಿರು ಕ್ರಾಂತಿಗೆ ಅಂತಾರಾಷ್ಟ್ರೀಯ ಮಹಿಳಾವರ್ಷ ಪ್ರೇರಣೆಯಾದದ್ದು ನಿಜ, ಮಹಿಳಾ ಸಾಹಿತ್ಯ ನೆಲೆಬೆಲೆಯ ಪರಾಮರ್ಶೆಗೂ, ಆತ್ಮಾವಲೋಕನಕ್ಕೂ ಭೂಮಿಕೆ ಸೃಷ್ಠಿಯಾಯಿತು. ಅಲ್ಲಿಂದ ಐತಿಹಾಸಿಕ ಹೆಜ್ಜೆ, ವೈಚಾರಿಕ, ವೈಜ್ಞಾನಿಕಬುದ್ಧಿ, ಭಾವಗಳ ಸಿದ್ಧತೆಯ ಮಶಾಲು ಹಿಡಿದು ಹೊರಟ ಲೇಖಕಿಯರ ಗಂಭೀರ, ಸೃಜನಶೀಲ ಕೃತಿಗಳು ಹೊರಬರಲು ಸಾಧ್ಯವಾಯಿತು. ಸತ್ವಶಾಲಿ ಬರಹ ಮೌಲ್ಯಯುತವಾದುದು ಎಂಬ ಗ್ರಹಿಕೆ ಗಟ್ಟಿಯಾಯ್ತು. ಸಾಹಿತ್ಯದ ಪಲ್ಲಟಗಳ ಹಾಗೂ ಸಾಮಾಜಿಕ ಸ್ಥಿತ್ಯಂತರಗಳ ಅರಿವಿನ ಸ್ಫೋಟದಿಂದ ಲೇಖಕಿಯರಿಂದು ಸಾಹಿತ್ಯದ ಎಲ್ಲಾ ಪ್ರಕಾರಗಳಲ್ಲಿಯೂ ಕ್ರಿಯಾಶೀಲರಾಗಿದ್ದಾರೆ. ಸಾಹಿತ್ಯಿಕವಾಗಿ ದೀರ್ಘಕಾಲಿಕ ಮಹತ್ಸಾಧನೆ ಮಾಡಿದ ಲೇಖಕಿಗೆ 'ಅತ್ತಿಮಬ್ಬೆ' ಹೆಸರಿನಲ್ಲಿ ಒಂದು ಲಕ್ಷ ರೂಪಾಯಿ ನಗದನ್ನೂ ಒಳಗೊಂಡ ಪ್ರಶಸ್ತಿಯಿಂದ ಪುರಸ್ಕರಿಸಬೇಕೆಂದು ಎಡಬಿಡದೆ ಸರಕಾರವನ್ನು ಕಾಡಿದೆ. ನನ್ನ ಹೋರಾಟದ ಸಾಂಸ್ಕೃತಿಕ ಆಯಾಮವನ್ನು ಮನಗಂಡು, ನಾನಿತ್ತ ಸೂಚನೆಯನ್ನು ಕರ್ನಾಟಕ ಸರ್ಕಾರ ಮಾನ್ಯ ಮಾಡಿತು. ಅಬ್ಬಕ್ಕರಾಣಿಯ ಧೈರ್ಯ, ಸಾಹಸವನ್ನು ಮನದಲ್ಲಿರಿಸಿಕೊಂಡು, ಮಂಗಳೂರು ಬಂದರಿಗೂ, ಮಂಗಳೂರಿನಿಂದ ಹೊರಡುವ ರೈಲಿಗೂ ಅಬ್ಬಕ್ಕರಾಣಿಯ ಹೆಸರಿಡುವುದರಲ್ಲಿ ಔಚಿತ್ಯವಿದೆ. ಕರಿಮೆಣಸಿನ ರಾಣಿ ಚೆನ್ನಾಭೈರಾದೇವಿಯ ನೆನಪನ್ನು ಚಿರಸ್ಥಾಯಿಗೊಳಿಸುವ ದಿಕ್ಕಿನಲ್ಲಿ ಈ ನಾಡು ಮಾಡಬೇಕಾದ ಕೆಲಸಗಳನ್ನು ಸರ್ಕಾರದ ಮತ್ತು ಜನತೆಯ ಗಮನಕ್ಕೆ ತಂದಿದ್ದು ಇನ್ನೂ ನೆನೆಗುದಿಗೆ ಬಿದ್ದಿರುವುದು ಶೋಚನೀಯವಾದುದು. ಈ ಮಹಾರಾಣಿ ಕರ್ನಾಟಕ ಸಾಹಿತ್ಯ, ಶಿಲ್ಪ, ಕಲೆ, ವಾಣಿಜ್ಯ, ವ್ಯವಹಾರ ಮತ್ತು ಸಂಸ್ಕೃತಿ ಪುರೋಭಿವೃದ್ಧಿಗೆ ನೀಡಿದ ಕೊಡುಗೆ ಅಪಾರವಾದುದು. ೧೯೭೩ ರಿಂದ ಮಹಿಳಾ ವಿಶ್ವವಿದ್ಯಾಲಯ ಆಗಬೇಕೆಂದು ಒಕ್ಕೊರಲಿನಿಂದ ಸಾರುತ್ತಾ, ನೂರಾರು ವೇದಿಕೆಗಳಿಂದ ಹಕ್ಕೊತ್ತಾಯ ಮಾಡುತ್ತಾ ಸರಕಾರದ ಮೇಲೆ ಒತ್ತಡ ಏರಿದ್ದಲ್ಲದೆ, ಸಾರ್ವಜನಿಕ ಅಭಿಪ್ರಾಯವನ್ನೂ ಡಾ. ಕಮಲ ಹಂಪನಾ ಅವರು ರೂಪಿಸಿದ ಪರಿಣಾಮ ಅಂದಿನ ಘನ ಸರಕಾರವೂ ಮಹಿಳಾ ವಿಶ್ವವಿದ್ಯಾಲಯವನ್ನು ಆರಂಭಿಸಿರುವುದು ಸಂತಸದಾಯಕವಾಗಿದೆ.

ಡಾ. ಗೀತಾನಾಗಭೂಷಣ ಅವರು ೭೬ನೇ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ (೨೦೧೦) ಮಾತನಾಡುತ್ತಾ, ಭೂಮಿ ತಾಯ್ತನದ ಸಂಕೇತ, ತಾಯಿ ಹೆಣ್ಣಿನದ ಗೌರವ, ಹೆಣ್ಣು ಎಂದರೆ ಅವಳು ಮಗಳು, ತಂಗಿ, ಅಕ್ಕ, ಚಿಕ್ಕಮ್ಮ, ಅತ್ತೆ, ಸೊಸೆ, ಗೆಳತಿ ಮೇಲಾಗಿ 'ಅವ್ವ' ಈಗಾಗಲೇ ನಡೆದಿರುವ ಎಪ್ಪತ್ತಾರು ಸಮ್ಮೇಳನಗಳಲ್ಲಿ ಮಹಿಳೆಯರಿಗೆ ಸಂದ ಪಾಲು ಎಷ್ಟು ? ನಾನೀಗ ನಾಲ್ಕನೆಯವಳು, ಮಹಿಳಾ ಸಮುದಾಯದ ಪ್ರತಿನಿಧಿತ್ವವನ್ನು ಇದಿರುಗೊಳಿಸಿಕೊಂಡಾಗ ಖಂಡಿತ ಒಂದು ನಿಟ್ಟುಸಿರು ಹೊರಬರದೆ ಇರದು. ಮಹಿಳೆಯರು ಸಾಹಿತ್ಯಸೃಷ್ಠಿಯಂಥ ಅನನ್ಯಸಾಂಸ್ಕೃತಿಕ ವಿದ್ಯಾಮಾನಗಳಲ್ಲಿ ಗೈರು ಹಾಜರಾದದ್ದು ಏಕೆ? ಹೆಣ್ಣೆಂಬ ಜೀವ ಭಾವದ ಪರಿಧಿಯೆಷ್ಟು? ಸೀಮಿತ ಪರಿಧಿಯನ್ನು ಸ್ಥಗಿತಗೊಳಿಸಿದವರ್ಯಾರು? ಅನ್ಯ ನಿರ್ಮಿತ ಪರಿಧಿಗಳನ್ನು ದಾಟಿ ಬರುವಂತೆ ಅವಳ ಕೈಕಾಲುಗಳಿಗೆ ಬಂಧನದ ಬೇಡಿ ಏಕೆ ತೊಡಿಸಲಾಯಿತು? ಅವಳ ಆ ಅಸೀಮ ಸಾಮರ್ಥ್ಯವನ್ನು ಯಾರಿಗಾದರೂ ನಿಯಂತ್ರಿಸಲು ಅದು ಹೇಗೆ ಸಾಧ್ಯವಾಯಿತು? ಈ ತಥಾಕಥಿತ ಚರಿತ್ರೆಯ ಹಿಂದೆ ಲಿಂಗ ತಾರತಮ್ಯದ ದೊಡ್ಡ ಪುರಾಣವೆ ಇದೆ. ಅದೇನೆ ಇರಲಿ, ಶತಮಾನಗಳ ಲಿಂಗಭೇದ ನೀತಿಯ ತಾತ್ವಿಕ, ಧಾರ್ಮಿಕ, ಆರ್ಥಿಕ, ರಾಜಕೀಯ, ಸಾಂಸ್ಕೃತಿಕ ಕಾರಣಗಳನ್ನು ಆಧುನಿಕ ಸ್ತ್ರೀ ಲೋಕದ ನಿಶ್ಚಳಗೊಳಿಸಿಕೊಂಡಿದೆ. ಲಿಂಗತಾರತಮ್ಯದ ಹಿಂದಿರುವ ದೃಷ್ಟಿ-ಧೋರಣೆಯನ್ನು ಬದಲಿಸುವ ನಿಟ್ಟಿನಲ್ಲಿ ಸಮಕಾಲೀನ ಸ್ತ್ರೀಸಮುದಾಯ ಸಂಚಲನಗೊಳ್ಳುತ್ತಿರುವುದು ಸಮಾಧಾನದ ಸಂಗತಿ. ಒಂದು ಸಹಸ್ರಮಾನದ ಹಿಂದೆಯೇ ಅಕ್ಕ ಮಹಾದೇವಿ, ಸತ್ಯಕ್ಕ, ಸೂಳೆ ಸಂಕವ್ವೆ, ಗೊಗ್ಗವ್ವೆ, ರೆಮ್ಮವ್ವೆಯಂಥ ವಚನಕಾರ್ತಿಯರು ಎತ್ತಿದ ಪ್ರಶ್ನೆಗಳು ಇವತ್ತಿಗೂ ವ್ಯವಸ್ಥೆಗೆ ನುಂಗಲಾರದ ತುತ್ತಾಗಿಯೇ ಪರಿಣಮಿಸಿದೆ. ಕರ್ನಾಟಕದ ಗ್ರಾಮೀಣ ಜನತೆಯ ಬದುಕು, ಅದರಲ್ಲೂ ಮಹಿಳೆಯರ ದಲಿತರ, ಅಲ್ಪಸಂಖ್ಯಾತರ ಬದುಕಿನ ಬಗೆಗೆ ನಮ್ಮ ದೃಷ್ಟಿಯನ್ನು ಕೇಂದ್ರೀಕರಿಸಬೇಕಿದೆ.

"ಹೆಣ್ಣಾಗಿ ಹುಟ್ಟುವುದಕ್ಕಿಂತ ಮಣ್ಣಾಗಿ ಹುಟ್ಟಿದರೆ
ಮಣ್ಣಿನ ಮೇಲೊಂದು ಮರವಾಗಿ ಹುಟ್ಟಿದರೆ
ಪುಣ್ಯವಂತರಿಗೆ ನೆರಳಾದೆ".

ಇಂಥ ಹತ್ತಾರು ಜಾನಪದ ತ್ರಿಪದಿಗಳು ಹೆಣ್ಣಿನ ಜನುಮದ ಬಗೆಗೆ ನಕಾರಾತ್ಮಕ ಪರಿಕಲ್ಪನೆಯನ್ನು ಕಟ್ಟಿಕೊಡುತ್ತದೆ. ಶೋಷಣೆಯ ಹಲವಾರು ಮಜಲುಗಳನ್ನು ಇಲ್ಲಿ ಕಂಡರೂ,

ಹೆಣ್ಣು ಹೆಣ್ಣಾದಡೆ ಗಂಡಿನ ಸೂತಕ
ಗಂಡು ಗಂಡಾದಡೆ ಹೆಣ್ಣಿನ ಸೂತಕ

ಮನದ ಸೂತಕ ಹಿಂಗಿದಡೆ ತನುವಿನ ಸೂತಕಕ್ಕೆ ತೆರಹುಂಟೆ ?
ಮುನ್ನಿಲ್ಲದ ಸೂತಕಕ್ಕೆ ಜಗ ಮರುಳಾಯಿತ್ತು ಚನ್ನಮಲ್ಲಿಕಾರ್ಜುನ

ಎಂದು ಅಕ್ಕನಂತೆ ಎಲ್ಲರೂ ಸಿಡಿದು ಏಳಲಿಲ್ಲವೇಕೆ ? ಎಂದು ಸಾತ್ವಿಕ ಕೋಪ ಬರದೆ ಇರದು. ಒಂದು ಅಸಮಾನ ವ್ಯವಸ್ಥೆಯಲ್ಲಿ ತಲಸ್ಪರ್ಶಿ ಬದಲಾವಣೆ ತರದ ಹೊರತು ಶೋಷಣೆ ನಿಲ್ಲುವುದಿಲ್ಲ ಎಂಬ ಸತ್ಯವನ್ನು ಮನಗಂಡಿದ್ದೇವೆ ಎಂದು ಡಾ.ಗೀತಾನಾಗಭೂಷಣ ಅಭಿಪ್ರಾಯಪಡುತ್ತಾರೆ. ಆಧುನಿಕತೆ–ಯಲ್ಲಿಂದು ಶೋಷಣೆಯ ಸ್ವರೂಪ ಮತ್ತು ಗಾತ್ರದಲ್ಲಿ ಬದಲಾವಣೆ ಆಗಿದೆ ಹೊರತು ಪರಿಪೂರ್ಣ ಅವಳು ಬಂಧಮುಕ್ತಳಾಗಿಲ್ಲ. ಹೆಚ್ಚುತ್ತಿರುವ ಬಾಲ್ಯವಿವಾಹ, ಕೌಟುಂಬಿಕಹಿಂಸೆ, ದೇವದಾಸಿಪದ್ಧತಿ ಇವೆಲ್ಲವೂ ರೋಗಗ್ರಸ್ತ ಸಮಾಜದ ಲಕ್ಷಣಗಳೇ ಆಗಿವೆ. ಇಂದು ಜೀವನ ಶೈಲಿಯಲ್ಲಿ ಕ್ರಾಂತಿಕಾರಕ ಅವಿಷ್ಕಾರಗಳಾದರೂ, ಶಹರುಗಳ ಕಾಲ್‌ಸೆಂಟರ್‌ಗಳಲ್ಲಿ, ಫ್ಯಾಕ್ಟರಿಗಳಲ್ಲಿ ಮತ್ತು ನೌಕರಸ್ತರಾಗಿ ಕೆಲಸ ಮಾಡುತ್ತಿರುವ ಮಹಿಳೆಯರು ಇನ್ನಿಲ್ಲದ ಸಂಕಟಗಳಿಗೆ ಬಲಿಯಾಗುತ್ತಿದ್ದಾರೆ. ಇತ್ತೀಚೆಗೆ ಒಂಟಿ ಮಹಿಳೆಯರ ಮೇಲೆ ಅತ್ಯಾಚಾರ ಮತ್ತು ಕೊಲೆಗಳು ಹೆಚ್ಚಾಗುತ್ತಿರುವುದು ಆತಂಕಕಾರಿ ಸಂಗತಿಯಾಗಿದೆ ಗ್ರಾಮೀಣ ಪ್ರದೇಶದ ರೈತಾಪಿ, ಕೃಷಿ, ಕಾರ್ಮಿಕ ಮಹಿಳೆಯರ ಸಮಸ್ಯೆಗಳು ಹೊಸ ಹೊಸ ರೂಪ ಪಡೆಯುತ್ತಿವೆ. ಈ ದೇಶದಲ್ಲಿ ಮಹಿಳೆಯರಿಗೆ ಕನಿಷ್ಠ ಶೌಚಾಲಯದ ವ್ಯವಸ್ಥೆ ಇಲ್ಲದಿರುವಿಕೆಯನ್ನು ಎಷ್ಟು ಸಲ ಪ್ರಶ್ನಿಸುವುದು? ಕನ್ನಡ ಸಾಹಿತ್ಯ ಸಮ್ಮೇಳನಾಧ್ಯಕ್ಷತೆಯನ್ನು ವಹಿಸಿದ ಹೆಣ್ಣು ಮಕ್ಕಳು, ಮಹಿಳಾ ಲೇಖಕಿಯರ ಚಿಂತನೆ ಹಾಗೂ ಮಹಿಳಾ ಸಂವೇದನೆಯ ಸುತ್ತ–ಮುತ್ತಲ ವಾಸ್ತವದ ಸತ್ಯತೆಯ ಬೆಳಕು ಚೆಲ್ಲಿರುವುದು ಮನೋಜ್ಞವಾಗಿದೆ. ಕನ್ನಡಿ–ಕನ್ನಡಿಗ ಮತ್ತು ಕರ್ನಾಟಕದ ಬಗ್ಗೆ ಮಹಿಳಾ ಸಮ್ಮೇಳನಾಧ್ಯಕ್ಷರು ತಮ್ಮ ವಿಚಾರಧಾರೆಯನ್ನು ವ್ಯಕ್ತಪಡಿಸಿರುವ ಪರಿಯನ್ನು ಮುಂದೆ ತಿಳಿಯೋಣ.

**೨. ಕನ್ನಡ – ಕನ್ನಡಿಗ – ಕರ್ನಾಟಕದ ಚಿಂತನೆ :**

ಶ್ರೀಮತಿ. ಜಯದೇವಿತಾಯಿಲಿಗಾಡೆ ಅವರು ಮಾತನಾಡುತ್ತಾ, ಜನತೆಯು ಅಖಂಡ ಕರ್ನಾಟಕದ ದಿವ್ಯ ಸ್ವಪ್ನವನ್ನು ಹೃದಯದಲ್ಲಿರಿಸಿಕೊಂಡು ಮುಂದುವರೆಯುತ್ತಿತ್ತು. ಅಂದು ಸಾಹಿತ್ಯ ಪರಿಷತ್ತು ಕೂಡ ರಾಜಕೀಯ ದೌರ್ಬಲ್ಯ ಮತ್ತು ಒತ್ತಡಕ್ಕೆ ಒಳಗಾಗಿತ್ತು. ೧೯೫೨ರಲ್ಲಿ ಬೇಲೂರಿನ ಸಾಹಿತ್ಯ ಸಮ್ಮೇಳನದಲ್ಲಿ ಅಖಂಡ ಕರ್ನಾಟಕದ ಗೊತ್ತುವಳಿಯನ್ನು ಮಂಡಿಸಿ, ಅದನ್ನು ನಿರ್ಣಯಿಸಲಾಗದಷ್ಟು ಅದು ನಿಷ್ಕ್ರಿಯವಾಗಿತ್ತು. ಅಖಂಡ ಕರ್ನಾಟಕದ ಹೋರಾಟವನ್ನು ಯಾವುದೇ ತರಹದ ಆಶೆಗಳನ್ನಿರಿಸಿಕೊಳ್ಳದೇ ನಾವು ಕೈಗೆತ್ತಿಕೊಂಡಿಲ್ಲ. ಕರ್ನಾಟಕ ಒಂದುಗೂಡುವುದು ನಿಶ್ಚಿತ, ಇದು ಅಂತಃಕರಣದ ಬಯಕೆ, ಇದು ಆಗಲೇಬೇಕು ಎಂದು ಬಿನ್ನವಿಸಿದರು. ಇಂತಹ ಉದ್ರಿಕ್ತವಾತಾವರಣ ತಿಳಿಯಾಗಿ ಅಖಂಡ ಕರ್ನಾಟಕ ಗೊತ್ತುವಳಿ ಅವಿರೋಧವಾಗಿ ಪಾಸಾಯಿತು. ಕನ್ನಡಕ್ಕಾಗಿ ಕಂಕಣ ಕಟ್ಟಿಸಿದ ನಮ್ಮ ಕವಿಗಳು “ಅಖಂಡ ಕರ್ನಾಟಕ ರಾಜಕೀಯ ನಾಟಕವಲ್ಲ” ಎಂಬ ಎಚ್ಚರಿಕೆಯನ್ನು ಕೊಡಬೇಕಾಯಿತು. ಅಂತೂ ಕೊನೆಗೊಮ್ಮೆ ನೆಲವೇ ಮೈ ಕೊಡವಿ ಎದ್ದಂತೆ ಮೈಸೂರು ರಾಜ್ಯವಾಯಿತು. ಆಗ ರಾಜ್ಯದ ಗಡಿ ಪ್ರದೇಶದ ಕೆಲ ಭಾಗಗಳು ಹೊರಗೆ ಉಳಿದವು, ಇಂದಿಗೂ ಅವು ಹಾಗೆಯೇ ಉಳಿದಿವೆ. ಈಗಾಗಲೇ ಅನೇಕ ಆಯೋಗಗಳು ಖಚಿತಪಡಿಸಿದ ಒಳ ಪ್ರದೇಶಗಳಲ್ಲಿಯೂ ಚುಂಚು ಪ್ರವೇಶ ಮಾಡಿ ಕಬಳಿಸುವ ಪ್ರಯತ್ನಗಳಾಗುತ್ತಿವೆ. ನಮ್ಮ ಸೀಮಾರೇಖೆ ನಿಶ್ಚಿತ ನೆಲೆಯನ್ನು ಕಂಡಿಲ್ಲ ! ನಮ್ಮ ನಾಡಿನ ಜನತೆ ನಿರ್ಭಯವಾಗಿ ಉಸಿರಾಡಿಸಿ ಬೆಳೆಯಲಿ, ತಮ್ಮ ನಾಡಿನ ನಿಶ್ಚಿತ ಸೀಮೆಯಲ್ಲಿ ನಿಂತು ನಿಸ್ಸೀಮವಾದ ಆಕಾಶವನ್ನೇ ತಬ್ಬಿಕೊಳ್ಳುವಂತಾಗಲಿ. ತಲೆ ತಲಾಂತರದಿಂದ ಸೌರ್ಯ ಸಾಹಸ, ಔದಾರ್ಯ ವೈಶಾಲ್ಯಗಳನ್ನು ಉಸಿರಾಡಿಸಿ, ಉನ್ನತ ಸಾಧನೆಗಳನ್ನು ಮೆರೆದ, ತುಂಬು ಜೀವನದಿ ಬದುಕಿ ಬಾಳಿದ ಕನ್ನಡಿಗರು ಇಂದು ಇದನ್ನು ಸರ್ವರೀತಿಯಿಂದಲೂ ರಕ್ಷಿಸಿಕೊಳ್ಳಲು ಭದ್ರಬಾಹುಗಳನ್ನು ಪಡೆಯಬೇಕು; ಸುಭದ್ರ ಹೃದಯವನ್ನು ಹೊಂದಬೇಕು, ಸುಚಿತ್ತವನ್ನು ಅರಳಿಸಿಕೊಳ್ಳಬೇಕು. ನಮ್ಮ ನಾಡಿನಲ್ಲಿನ ಇತರ ರಾಜ್ಯದ ಜನರು ಕನ್ನಡವನ್ನು ಕಲಿತು, ಕನ್ನಡಿಗರೊಂದಿಗೆ ಹೊಂದಿಕೊಂಡು ನಡೆಯಬೇಕೆಂದಿದ್ದಾರೆ. ಶ್ರೀಮತಿ. ಶಾಂತ ದೇವಿ ಮಾಳವಾಡ ಅವರು ಕನ್ನಡದ ಕಣ್ವರೆನಿಸಿದ್ದ ಬಿ.ಎಂ.ಶ್ರೀ. ಅವರ ಭಾಷಣದ ತುಣುಕನ್ನು ನೆನಪಿಸಿಕೊಳ್ಳುತ್ತಾ “ಧಾರವಾಡ ಕನ್ನಡ ಗಂಡು ಕನ್ನಡ, ಬೆಂಗಳೂರು ಕನ್ನಡ ಹೆಣ್ಣು ಕನ್ನಡ, ಈ ಎರಡೂ ಭಾಷೆಯ ನಾಡು ಒಂದಾದರೆ ಒಳಿತು, ನಾಡಿನ ಜನತೆಯಲ್ಲಿ ಭಾವೈಕ್ಯ ಮೂಡಿದರೆ, ಕನ್ನಡಾಭಿಮಾನ ರಕ್ತದ ಕಣಕಣದಲ್ಲಿ ಮಿಡಿದರೆ, ನಾಡು ಅಖಂಡ ಕರ್ನಾಟಕ ಆಗುವುದು” ಎಂಬ ಹೇಳಿಕೆಯೂ ಇಂದಿಗೂ ಪ್ರಸ್ತುತವಾಗಿದೆ. ಶತಮಾನಕಂಡ “ಕರ್ನಾಟಕ ವಿದ್ಯಾವರ್ಧಕ ಸಂಘ’ ಬೆಂಗಳೂರಿನ ಕನ್ನಡ ಸಾಹಿತ್ಯ ಪರಿಷತ್ತು ಪರಸ್ಪರ ಕೂಡಿ ಒಂದಾಗಿ ಕನ್ನಡದ ಕಾಯಕಕ್ಕೆ ಅಣಿಯಾದರೆ, ನಾಡು–ನುಡಿ ಅಭಿಮಾನ ಜನಕೋಟಿಯಲ್ಲಿ ಹೆಚ್ಚಾಗುತ್ತದೆ ಎಂಬ ವಿಶ್ವಾಸ ನನಗಿದೆ. ಕನ್ನಡನಾಡಿಗೆ ಉಜ್ವಲ ಪರಂಪರೆ ಇದೆ. ಸಮೃದ್ಧ ಭೂ ಸಂಪತ್ತಿದೆ. ಸಹ್ಯಾದ್ರಿಯ ವನಸಂಪತ್ತಿದೆ. ಕಡಲತೀರ, ಸಿರಿಗಂಧದ ಬೀಡಿದೆ. ಕರ್ನಾಟಕದಲ್ಲಿ ನದಿಗಳು, ರಾಜಮನೆತನಗಳು, ಕನ್ನಡಸಂಸ್ಕೃತಿಯನ್ನು ಬೆಳಸಿ ಪೋಷಿಸಿದ್ದಾರೆ. ಕಾವೇರಿಯಿಂದ ಗೋದಾವರಿವರೆಗೆ ಹಬ್ಬಿದ ಈ ನಾಡು ಸರ್ವಧರ್ಮಸಮನ್ವಯದ ಬೀಡು. ಕಾರ್ಯ, ತ್ಯಾಗ, ಶಿಲ್ಪಿ, ಸಂಗೀತ ಹಾಗೂ ಗತವೈಭವವನ್ನು ಸಾರುವ ಶಾಸನಗಳು ನಮ್ಮಲ್ಲಿವೆ. ಇವುಗಳು ನಮ್ಮೆಲ್ಲರ ಮನದಲ್ಲಿ ಸದಾಮಿಡಿಯುವಂತಾಗಲಿ, ಕನ್ನಡಾಭಿಮಾನವನ್ನುಬೆಳೆಸುವಲ್ಲಿ ಕನ್ನಡಸಾಹಿತ್ಯ ಸಮ್ಮೇಳನಗಳು ಪ್ರಧಾನವಾದ ಪಾತ್ರವಹಿಸಲಿ ಎಂದಿದ್ದಾರೆ.

ಕನ್ನಡಿಗರ ಭಾವಾಭಿವ್ಯಕ್ತಿಯ ಸ್ವರೂಪವಾದ, ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಶ್ರೀಮತಿ. ಶಾಂತಾದೇವಿ ಮಾಳವಾಡ ಅವರು ತುರ್ತಾಗಿ ಆಗಬೇಕಾದ ಕನ್ನಡದ ಕೆಲಸ ಕಾರ್ಯಗಳ ಕುರಿತು ಸರ್ಕಾರದ ಗಮನಕ್ಕೆ ತರಲು ಪ್ರಯತ್ನಿಸಿದ್ದಾರೆ. ಕರ್ನಾಟಕದ ಆಡಳಿತ ಭಾಷೆಯೆಂದು ಕನ್ನಡವನ್ನೂ ಸರ್ಕಾರ ಘೋಷಿಸಿದ್ದರೂ ಅದು ಕಾರ್ಯರೂಪಕ್ಕೆ ಬರದಿರುವುದರಿಂದ, ನ್ಯಾಯಾಂಗ, ಆಡಳಿತಾಂಗ ಹಾಗೂ ಶಿಕ್ಷಣ ಕ್ಷೇತ್ರದಲ್ಲಿ ಕನ್ನಡ ಭಾಷೆಗೆ ಆಧ್ಯತೆ ನೀಡಬೇಕು. ರಾಜ್ಯದ ಪ್ರಾಥಮಿಕ ಶಿಕ್ಷಣ ಮಾತೃಭಾಷೆಯಲ್ಲಿಯೇ ಆಗಬೇಕು. ಪೂರ್ವಪದವಿ, ಪದವಿ ಮತ್ತು ವಿಶ್ವವಿದ್ಯಾಲಯಗಳಲ್ಲಿ ಕನ್ನಡಕ್ಕೆ ಪ್ರಾತಿನಿಧ್ಯತೆನೀಡುವುದು, ಬಿ.ಇಡಿ ಸಾಮಾನ್ಯ ಪ್ರವೇಶ ಪರೀಕ್ಷೆಯಲ್ಲಿ ಕನ್ನಡವನ್ನು ಐಚ್ಛಿಕ ವಿಷಯವನ್ನಾಗಿ ಅಳವಡಿಸುವುದು, ಪುಸ್ತಕಸಂಸ್ಕೃತಿ, ರಾಜ್ಯದ ಗಡಿಭಾಗದಲ್ಲಿ ಹೆಚ್ಚು ಹೆಚ್ಚು ಕನ್ನಡಪರ ಕಾರ್ಯಕ್ರಮಗಳನ್ನು ಆಯೋಜಿಸುವುದು, ಕರ್ನಾಟಕದ ನೆಲ–ಜಲ ಸಮಸ್ಯೆಗಳನ್ನು ಇತ್ಯರ್ಥಗೊಳಿಸುವುದು, ಕನ್ನಡ ಗಣಕ ಯಂತ್ರವನ್ನು ಸರಕಾರ ಮತ್ತು ಸಾರ್ವಜನಿಕ ಸಂಸ್ಥೆಗಳು ರಾಜ್ಯದ ಎಲ್ಲಾ ಭಾಗಗಳಲ್ಲಿ ಬಳಕೆಗೆ ತರುವುದು, ದಿನಪತ್ರಿಕೆಗಳು, ಮಾಸ ಪತ್ರಿಕೆಗಳು, ಪಾರ್ಷಿಕಗಳು, ಮಾಸಿಕಗಳು ಆದಷ್ಟು ಹೆಚ್ಚಿಗೆ ನಾಡು–ನುಡಿ–ಸಾಹಿತ್ಯ ಮತ್ತು ಸಂಸ್ಕೃತಿಗಳನ್ನು ಪರಿಚಯಿಸುತ್ತಾ, ಕನ್ನಡಿಗರ ಹೃದಯವನ್ನು ಸುಸಂಸ್ಕೃತಗೊಳಿಸಬೇಕೆಂದಿದ್ದಾರೆ.

ಡಾ. ಕಮಲ ಹಂಪನಾ ಅವರು ಮಾತನಾಡುತ್ತಾ, ಎರಡೂವರೆ

ಸಾವಿರ ವರ್ಷಗಳ ಸಾಹಿತ್ಯ, ಸತ್ವ ಮತ್ತು ಸತ್ಯದಿಂದ ಹುಟ್ಟಿದ್ದು ಕನ್ನಡ. ಅದರ ಬೆಳಕಿನಡಿಯಲ್ಲಿ ಕೋಟಿ-ಕೋಟಿ ಕನ್ನಡಿಗರು ಬದುಕಿದ್ದಾರೆ. ರಾಜಮನೆತನಗಳು, ಸಾಹಿತ್ಯ ಕೃತಿಗಳು, ಕಾಯಗಳ ಸಾರಸಮಸ್ತವನ್ನೂ ಹೀರಿ ಸೂರೆ ಮಾಡಿ ಅದನ್ನು ಕನ್ನಡದ ಕಾಲುವೆಯಲ್ಲಿ ಹರಿಸಿದರು. ಸಂಸ್ಕೃತ ಪ್ರಾಕೃತಿಗಳಿಗೆ ಕನ್ನಡ ಎಲ್ಲಾ ರೀತಿಯಲ್ಲಿ ಸರಿಸಮಾನತೆ ಹೊಂದಿದೆ ಎಂದು ತೋರಿದ ಶ್ರಮಣರು, ಶರಣರು, ದಾಸರು, ಅವುಗಳನ್ನು ಕನ್ನಡದಲ್ಲಿ ಭಾವಿಸಿ, ಅನುಭವಿಸುವುದರೊಂದಿಗೆ "ಕನ್ನಡಕ್ಕಿರುವ ಅಗಾದ ಹಸಿವು, ಜೀರ್ಣಶಕ್ತಿ ಮತ್ತು ಅಸ್ಮಿತೆಯನ್ನು ತೋರಿಸಿದರು" ಕನ್ನಡದ ಮೂಲಕ ದುಃಖ ದುಮ್ಮಾನ, ಸುಖ ಸುಮ್ಮಾನ, ಮಾತೃಭಾಷೆಯ ಸಂಪನ್ನತೆ ಹಾಗೂ ಕುತ್ತಿಗೆಯವರೆಗೆ ಬಂದ ಕುತ್ತುಗಳಿಂದ ಕನ್ನಡವನ್ನು ಬದುಕಿಸಿದ ಮೃತ್ಯುಂಜಯರಾದರು. ಕನ್ನಡವು ಕೋಟಿ-ಕೋಟಿ ಜನರ ತಾಯ್ನುಡಿಯಾಗಿರುವುದರಿಂದ, ಬಡಾವಣೆಗಳಿಗೆ, ರಸ್ತೆಗಳಿಗೆ, ನಾಮಕರಣ ಮಾಡುವುದರೊಂದಿಗೆ, ನಾಡು-ನುಡಿ ಅಭಿಮಾನವನ್ನು ನುಡಿಜಾಣರಿಗೆ ಅರ್ಪಿಸಿದ್ದಾರೆ. ಕನ್ನಡದ ಕಾಳುಗಳನ್ನು ಮಕ್ಕಳ ಮನಸ್ಸಿನ ಹೊಲದಲ್ಲಿ ಬಿತ್ತಬೇಕು. ಡಾ. ಎ.ಪಿ.ಜೆ. ಅಬ್ದುಲ್ ಕಲಾಮರು ಚಿಕ್ಕವರಿಗೆ ಪ್ರಾಮುಖ್ಯತೆಯನ್ನು ಕೊಡವುದನ್ನು ಗಮನಿಸಬೇಕು, ಏಕೆಂದರೆ ಬಾಲವಾಡಿಗಳ ಹಂತದಲ್ಲಿಯೇ ಕನ್ನಡದ ಕೂಸುಗಳಿಗೆ, ಕನ್ನಡ ಪಠ್ಯ ಕಡ್ಡಾಯ ಮಾಡುವುದರ ಮುಖೇನ ಕಲಿಸಬೇಕು. ಕನ್ನಡ ಶಾಲೆಗಳ ಅಮೂಲಾಗ್ರ ಸುಧಾರಣೆಯ ಜರೂರಿದೆ. ಬಾಲವಾಡಿಯಿಂದ, ಸ್ನಾತಕೋತ್ತರದವರೆಗೆ ಕನ್ನಡ ಮಾಧ್ಯಮದಲ್ಲಿಯೇ ಕಲಿಸುವುದು, ಕನ್ನಡವನ್ನು ಪುಷ್ಟಗೊಳಿಸುವ, ಸಬಲೀಕರಣದ ಕಾಯಕ ನಮ್ಮಿಂದಾಗಬೇಕು, ಕನ್ನಡ ಎನ್ನುವುದು ಐದುಕೋಟಿ ಕನ್ನಡಿಗರ ಭಾವಪ್ರಪಂಚ. ದೆಹಲಿಯಲ್ಲಿರುವಂತೆ, ಮುಂಬಯಿಯಿಯಲ್ಲಿಯೂ ಒಂದು ಕನ್ನಡ ಭವನದ ಅವಶ್ಯಕತೆ ಇದೆ. ಗೋವಾದಲ್ಲಿ ಹೆಚ್ಚಿಗೆ ಕನ್ನಡಿಗರೂ ನೆಲೆಸಿದ್ದರೂ, ಕನ್ನಡದಪಠ್ಯಗಳು ಉಚಿತವಾಗಿ ಸಿಗುತ್ತಿಲ್ಲ ! ಮುಂಬಯಿ ಮತ್ತು ಕಾಸರಗೋಡಿನ ಪ್ರತಿನಿಧಿಗಳು ಸಾಹಿತ್ಯ ಪರಿಷತ್ತಿನಲ್ಲಿದ್ದಾರೆ ಇದರಂತೆ ಎಲ್ಲಾ ಅಕಾಡೆಮಿಗಳಲ್ಲಿಯೂ ಒಬ್ಬೊಬ್ಬರು ಸದಸ್ಯರು ಇರುವುದು ಸೂಕ್ತ. ಗಡಿಗಳಲ್ಲಿ ಹೊರನಾಡಿನಲ್ಲಿ ಕನ್ನಡದ ಸೊಲ್ಲು ಸೊಗಡು ಸೂಸುವ ಹಾಗೆ ತಿಂಗಳಿಗೊಂದು ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಅಕಾಡೆಮಿಗಳಿಂದ ಏರ್ಪಡಿಸುವುದು. "ಕನ್ನಡ ಉಳಿಸಿ, ಕನ್ನಡ ಬಳಸಿ" ಎಂಬ ಗೋಡೆ ಬರಹ ವರ್ಷವಿಡೀ ಕನ್ನಡ ರಾಜ್ಯೋತ್ಸವ ಆಚರಣೆಯಲ್ಲಿನ ನಿತ್ಯೋತ್ಸವವೆನಿಸುವತ್ತ, ಅಣಿಯಾಗುವುದು. ಭಾಷಾವಾರು ಪ್ರಾಂತ್ಯರಚನೆಯಿಂದ ಎಷ್ಟೋ ಭೂಮಿ, ಊರುಕೇರಿ ಇನ್ನೂ ನೆರೆರಾಜ್ಯಗಳಲ್ಲಿ ಉಳಿದಿದೆ. ಕನ್ನಡಿಗರ ಸ್ಥಿತಿ, ಕನ್ನಡ ಶಿಕ್ಷಕರ ಸ್ಥಿತಿ, ದಯನೀಯವಾಗಿದೆ. ಗಡಿಗಳೆಡೆಯಲ್ಲಿ ಕಟ್ಟೆಚ್ಚರ ಸಡಿಲವಾಗಿದೆ. ಕನ್ನಡ ಭಾಷೆಯಷ್ಟೇ, ಮಾತ್ರವಲ್ಲದೇ ಅದರೊಂದಿಗೆ ಅವಿಭಾಜ್ಯವಾಗಿ ಬೆಸೆದ ಇತಿಹಾಸ, ಕೋಟೆ ಕೊತ್ತಲ, ಯಕ್ಷಗಾನ, ಜಾನಪದ, ಪರಂಪರೆ, ಸಾಹಿತ್ಯ ಮತ್ತು ಸಂಸ್ಕೃತಿಯನ್ನೂ ಸಂರಕ್ಷಿಸಲ್ಪಡಬೇಕು. ಭಾಷಾ ಅಲ್ಪಸಂಖ್ಯಾತರಿಗೆ ಸಂವಿಧಾನಾತ್ಮಕವಾಗಿ ಕಲ್ಪಿತವಾದ ಸವಲತ್ತುಗಳು ಕೇರಳದಲ್ಲಿನ ಎಲ್ಲ ಕನ್ನಡಿಗರಿಗೂ ಸಿಗಬೇಕು. ಕಾಸರಗೋಡು ಕನ್ನಡ ನಾಡಿನೊಂದಿಗೆ ಕೂಡಲ ಸಂಗಮವಾಗುವವರಿಗೂ ಈ ಎಲ್ಲಾ ಹಕ್ಕೊತ್ತಾಯ ಜೀವಂತವಾಗಿ ಜಾರಿಯಲ್ಲಿರಬೇಕು. ಮಹಾಜನ ವರದಿಯೇ ಐತೀರ್ಪೆಂದು ತಲೆಬಾಗುವುದು. ಅದು ಜಾರಿಗೆ ಬರುವವರೆಗೆ ಈಗ ಇರುವ ವ್ಯವಸ್ಥೆಯಲ್ಲಿ ಸೌಹಾರ್ದವನ್ನು ಕಲಕಿ ರಾಡಿಗೊಳಿಸದೆ ಒಟ್ಟಿಗೆ ಬಾಳುವುದು. ಭಗವಂತ ಬಂದರೂ ಬೆಳಗಾವಿಯನ್ನು ಕನ್ನಡಿಗರಿಗೆ ಒಪ್ಪಿಸುತ್ತಾನೆ. ಬೆಳಗಾವಿ ಕರ್ನಾಟಕದ ಅವಿಭಾಜ್ಯ ಅಂಗವೆಂಬುದು ಸತ್ಯಸ್ಯ ಸತ್ಯ. ಹೊರನಾಡ ಕನ್ನಡವನ್ನು ಜೀವಂತವಾಗಿರುಸಲು ಸುಸಂಬದ್ಧ, ಪರಿಣಾಮಕಾರಿ 'ಪ್ಯಾಕೇಜ್' ಸಿದ್ಧಪಡಿಸುವುದು ಎಂದು ಡಾ.ಕಮಲ ಹಂಪನಾ ರವರ ಕನ್ನಡ ಪರಚಿಂತನೆಗಳು, ಕನ್ನಡಿಗರ ಭವಿಷ್ಯದ ಚಿಂತನೆಗೆ ದಾರಿದೀಪವಾಗಿದೆ, ಕರ್ನಾಟಕದ ಮೂಲೆ ಮೂಲೆಯಲ್ಲಿ ಸಾವಿರ ಸಾವಿರ ಸಂಖ್ಯೆಯಲ್ಲಿ ವಾಸಿಸುತ್ತಿರುವ ವಲಸೆ ಕನ್ನಡಿಗರಿಗೆ 'ಅಕ್ಷರ' ಕೊಡಲು ಸಾಧ್ಯವಾಗುತ್ತಿಲ್ಲ ! ಶಾಲೆಯ ಮುಖವೇ ನೋಡದ ಕೋಟಿ, ಕೋಟಿ ಜನರು ನಮ್ಮೊಂದಿಗಿದ್ದಾರೆ, ಅಕ್ಷರ ಕೊಡಬೇಕಾದ ಪ್ರಭುತ್ವವೇ ಕೈಚೆಲ್ಲಿ ಕುಳಿತಿರುವಾಗ, ಕನ್ನಡ ಸಾಹಿತಿಗಳ ಹೊಣೆಗಾರಿಕೆ ಏನು? ಉತ್ತರ ಕರ್ನಾಟಕದ ಬಹುತೇಕ ಜಿಲ್ಲೆಗಳು 'ಬರ ಮತ್ತು ನೆರೆ' ಗಳಿಂದ ತತ್ತರಿಸಿವೆ. ಆಸ್ತಿ-ಪಾಸ್ತಿ, ಜಾನುವಾರುಗಳು, ಮನೆಗಳನ್ನು ಕಳೆದುಕೊಂಡು ಅವರ ಜೀವನ ಮೂರಾಬಟ್ಟೆಯಾಗಿದೆ. ಅನ್ಯಭಾಷಿಗರು ಮತ್ತು ಹೊರನಾಡ ಕನ್ನಡಿಗರ ಬಗ್ಗೆಯೂ ಡಾ.ಗೀತಾನಾಗಭೂಷಣ ಅವರು ಚಿಂತಿಸಿರುವುದು ಶ್ಲಾಘನೀಯವಾದುದು. ಕನ್ನಡ ಭಾಷೆ ಮತ್ತು ಸಾಹಿತ್ಯದ ಬಗೆಗಿನ ಮಹಿಳಾ ಚಿಂತಕರ ನಿಲುವುಗಳು ಮಹತ್ವಪೂರ್ಣವಾದುವೆಂಬುದು ಮುಂದೆ ತಿಳಿಯಬಹುದು.

**೩. ಕನ್ನಡ ಭಾಷೆ ಮತ್ತು ಸಾಹಿತ್ಯದ ಬಗೆಗೆ ಮಹಿಳಾ ಚಿಂತನೆಗಳು : -** ಶ್ರೀಮತಿ. ಜಯದೇವಿ ಲಿಗಾಡೆ ಅವರು ಭಾಷೆಯ ಬಗ್ಗೆ ಮಾಡನಾಡುತ್ತಾ "ಭಾಷೆಯು ಸಾಹಿತಿಗಳ ಸೃಜನಶೀಲತೆಯಿಂದ ಜನ-ಜನರನ್ನು ಒಂದು ಗೂಡಿಸುವ, ಹೃದಯ-ಹೃದಯಗಳಲ್ಲಿ ಬೆಸೆಯುವ ಭಾವಸೇತುವೆಯಾಗಿದೆ" ಮನ-ಮನ ಕೂಡಿದರೆ ಮಾತು, ಆದುದರಿಂದ ರಾಷ್ಟ್ರೀಯ ಭಾಷೆ ಮತ್ತು ಅಂತರ ರಾಷ್ಟ್ರೀಯ ಭಾಷೆಯನ್ನು ನಮ್ಮ ಜನತೆ ಕಲಿಯಬೇಕು. ಕನ್ನಡ ಸಾಹಿತಿಗಳು ನಮ್ಮ ಸಾಹಿತ್ಯವನ್ನು ಇತರೆ ಭಾಷೆಗೆ ಅನುವಾದ ಮಾಡುವುದರ ಮುಖೇನಾ ಕನ್ನಡ ಸಾಹಿತ್ಯದ ಹಿರಿಮೆಯನ್ನು ಎತ್ತಿತೋರಿಸುವುದು. ಇದು ವಿಶ್ವವಿದ್ಯಾಲಯದ ಕಾಲೇಜುಗಳ ಭಾಷಾ ಪ್ರಾಧ್ಯಾಪಕರ ಹೊಣೆಯಾಗಿದೆ. ದೇಶ-ವಿದೇಶಗಳ ಸಾಹಿತ್ಯದ ಪರಿಚಯ ಬೆಳೆದು ನಮ್ಮ ಸಾಹಿತ್ಯದ ಅಂತಸ್ತನ್ನು ಹೆಚ್ಚಿಸಲು ಸಾಧ್ಯವಾಗುವುದು.

ಕನ್ನಡ ಸಾಹಿತ್ಯದಲ್ಲಿ ಜನಸಾಮಾನ್ಯರ ಆಂದೋಲನವೇ ನಡೆದಿದೆ. ಮಾನವ ಕಲ್ಯಾಣ ಮತ್ತು ಬಯಸಿದ ಅನುಭವಿ ಜನಸಾಮಾನ್ಯರು ತಮ್ಮ ಜೀವನವನ್ನು ಹಸನು ಮಾಡಿಕೊಂಡು ನಡೆದಂತೆ ನುಡಿದು, ಅನುಭವದ ಅಡುಗೆಯನ್ನು ಎಲ್ಲರಿಗೂ ಉಣಬಡಿಸಿದರು. ಇದರಲ್ಲಿ ಮಹಿಳೆಯರಿಂದ ನಿರ್ಮಿತವಾದ ಸಾಹಿತ್ಯವು ಗಣನೀಯವಾಗಿದೆ. ಅವರ ಬಳುವಳಿಯಲ್ಲಿಯೇ ನಾವಿಂದು ನಡೆದು ಬಂದಿದ್ದೇವೆಯೆಂದು ನನ್ನ ನಂಬುಗೆ. ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ, ಜೈನ ಸಾಹಿತ್ಯ, ವೀರಶೈವ ಸಾಹಿತ್ಯ, ಬ್ರಾಹ್ಮಣ ಸಾಹಿತ್ಯ ಎಂದು ದಾರ್ಶನಿಕ ಹಿನ್ನೆಲೆಯಲ್ಲಿ ಚಿಂತಿಸದೆ, ಜಾತಿಯ ದೃಷ್ಟಿಕೋನದಿಂದ ಚಿಂತಿಸಿದೆ, ಇಂದು ಪುನರ್ಘಟಿಸುವ ಕಾಲ ಬಂದಿದೆ. ಕನ್ನಡ ಸಾಹಿತ್ಯಕ್ಕೆ ಉಜ್ವಲವಾದ ಪರಂಪರೆ ಇದೆ. ಆಧ್ಯಾತ್ಮ, ಅನುಭವ, ಯೋಗ, ಮೀಮಾಂಸೆ ಮುಂತಾದ ಉನ್ನತ ವಿಚಾರಗಳನ್ನು ತಿಳಿಗನ್ನಡದಲ್ಲಿ ಹೇಳಿ, ಯಶಸ್ವೀ ಪ್ರಯೋಗವನ್ನು ನಮ್ಮವರು ಮಾಡಿತೋರಿಸಿದರು. ವಚನ, ಷಟ್ಪದಿ, ಸಾಂಗತ್ಯ, ರಗಳೆ, ಸುಳಾದಿ, ಉಗಾಭೋಗ, ಕೀರ್ತನೆ, ತ್ರಿಪದಿಗಳ ದೇಸಿ ಪ್ರವಾಹ ಕನ್ನಡ ಸಾಹಿತ್ಯವನ್ನು ಶ್ರೀಮಂತಗೊಳಿಸಿತು. ಕನ್ನಡದಲಿಪಿ, ಸಾಹಿತ್ಯದಲ್ಲಿ ಕವಿರಾಜಮಾರ್ಗ ಗ್ರಂಥ ಮತ್ತು ಪ್ರಾತಃಸ್ಮರಣೀಯರಾದ ಆದಿಕವಿ ಪಂಪ, ರನ್ನ, ಪೊನ್ನ, ಜನ್ನ, ಅಗ್ಗಳ, ನಾಗಚಂದ್ರ, ಕೇಶಿರಾಜ, ನೇಮಿಚಂದ್ರ ರಾಘವಾಂಕ ಮುಂತಾದವರನ್ನು ನೆನೆಯುತ್ತಾ, ಇಪ್ಪತ್ತನೆಯ ಶತಮಾನದ ಸಾಹಿತ್ಯ ಪ್ರಕಾರಗಳು, ಮಹಾಛಂದಸ್ಸಿನ, ಉನ್ನತ ಸಾಧನೆಯೂ ಗೋಚರಿಸಿತು. ಕುವೆಂಪು ಮತ್ತು ದ.ರಾ.ಬೇಂದ್ರೆ ಅವರಿಗೆ ಜ್ಞಾನಪೀಠ ಪ್ರಶಸ್ತಿ ದೊರೆತಿದ್ದು ಕನ್ನಡ

ಸಾಹಿತ್ಯದ ಎತ್ತರವನ್ನು ತೋರಿಸುತ್ತದೆ. ಇಂಥ ಪ್ರಶಸ್ತಿಗೆ ಅರ್ಹರಾಗಿರುವ ಸಾಹಿತಿಗಳು ನಮ್ಮಲ್ಲಿದ್ದರೇನೇ ಕನ್ನಡ ಸಾಹಿತ್ಯ, ವಿಶ್ವ ಮಟ್ಟಕ್ಕೆ ತಲುಪಲು ಸಾಧ್ಯವಾಗುತ್ತದೆ. ಇಂದಿನ ಯುಗಧರ್ಮಕ್ಕನುಗುಣವಾಗಿ ನಮ್ಮ ಬರಹಗಾರರಲ್ಲಿನ ಸಾಮಾಜಿಕ ಪ್ರಜ್ಞೆ, ತಮ್ಮ ಅಭಿವ್ಯಕ್ತಿಗೆ ತಕ್ಕ ಹೊಸ ಮಾಧ್ಯಮವನ್ನು ಹುಡುಕಿಕೊಂಡು, ರಮ್ಯ, ನವ್ಯ, ಪ್ರಗತಿಶೀಲ ಮೊದಲಾದ, ಸಾಹಿತ್ಯ ಪ್ರಯೋಗ ನಡೆಸಿದ್ದಾರೆ. ಸಂಶೋಧನೆ, ಸಂಪಾದನೆ, ವಿಚಾರ ವಿಮರ್ಶೆ, ಮೊದಲಾದವುಗಳು ಕನ್ನಡ ಪ್ರಗತಿಯ ಸೂಚಕಗಳಾಗಿವೆ. ನಮ್ಮ ಲೇಖಕರು ತಮ್ಮ ಅರಿವಿಗೆ, ಅನುಭವಕ್ಕೆ ನಿಲುಕುವ ಸಾಹಿತ್ಯದ ಒಂದು ಪ್ರಕಾರವನ್ನು ಆಯ್ಕೆ ಮಾಡಿಕೊಂಡು ತಮ್ಮ ಸಾಧನೆ ಮುಂದುವರೆಸಬೇಕು. ಆಗ ಅವರ ಸಾಹಿತ್ಯ ಸೃಷ್ಠಿ, ಉನ್ನತ ಸಿದ್ಧಿಯನ್ನು ಪಡೆಯಲು ಸಾಧ್ಯವಾಗುತ್ತದೆ. ಇಂದು ಕನ್ನಡ ಭಾಷೆಯು ವೈಜ್ಞಾನಿಕ, ತಾಂತ್ರಿಕ, ನಿಕೃಷಿಕ, ವೈದ್ಯಕೀಯ ಜ್ಞಾನವನ್ನು ಅಳವಡಿಸಿಕೊಂಡು ಕನ್ನಡದಲ್ಲಿ ಗ್ರಂಥ ರಚಿಸಿ, ನಮ್ಮ ಭಾಷೆಯೂ ಯಾವುದೇ ವಿಧದ ಜ್ಞಾನವನ್ನು ವ್ಯಕ್ತಗೊಳಿಸುವ ಕಸುವನ್ನು ಪಡೆದಿದೆ. ಕನ್ನಡವನ್ನು ಆಡಳಿತ ಭಾಷೆಯನ್ನಾಗಿ ಮಾಡಬೇಕು, ವಿಶ್ವವಿದ್ಯಾಲಯಗಳು ಕನ್ನಡ ಮಾಧ್ಯಮವನ್ನು ಸ್ವೀಕರಿಸಬೇಕು, ವಿಶ್ವವಿದ್ಯಾಲಯದ ಅಧಿಕಾರಿಗಳು, ಪ್ರಾಧ್ಯಾಪಕರು ಇಂಥಹ ಕನ್ನಡ ಕಟ್ಟುವ ಕೆಲಸದಲ್ಲಿ ನೆರವಾಗಬೇಕು. ಕನ್ನಡ ಸಾಹಿತ್ಯ ಪರಿಷತ್ತು ಕನ್ನಡ ಜನರನ್ನು ಒಂದುಗೂಡಿಸಲು ಏಕಮೇವ ಸಂಸ್ಥೆಯಾಗಿ ದುಡಿಯುತ್ತಿದೆ. ಕನ್ನಡನಾಡಿನ ಜನ ಒಂದುಗೂಡಬೇಕು, ಮುನ್ನಡೆಯಬೇಕೆಂಬ ದೃಷ್ಠಿಯನ್ನಿರಿಸಿಕೊಂಡು ಕನ್ನಡ ಭಾಷೆಗೆ ಸಂಬಂಧಿಸಿದ ಕೃತಿಗಳು, ನಿಘಂಟುಗಳ ಕಾರ್ಯ ಮುಂದುವರೆಯಬೇಕು ಎಂದು ತಮ್ಮ ಭಾಷಣದಲ್ಲಿ ಅಭಿವ್ಯಕ್ತಿಸಿದ್ದಾರೆ.

ಶ್ರೀಮತಿ. ಶಾಂತದೇವಿ ಮಾಳವಾಡ ಅವರು ತಮ್ಮ ಭಾಷಣಗಳಲ್ಲಿ ೨೦ನೇ ಶತಮಾನದಲ್ಲಿ ಕನ್ನಡ ಕಾವ್ಯವು ಹೊಸತನ ಪಡೆದಿದೆ, ಹಳೆಯ ಕವಿಗಳ ಕಾವ್ಯ ವಸ್ತುಗಳ ಬದಲಾಗಿ ಸಾಹಿತ್ಯದಲ್ಲಿ ಹೊಸವಸ್ತು ಆವಿಷ್ಕಾರ ಪಡೆದುಕೊಂಡಿತು. ಪಾಶ್ಚಾತ್ಯ ಸಾಹಿತ್ಯದ ಪ್ರಭಾವದಿಂದ, ಆಧುನಿಕ ಕನ್ನಡ ಸಾಹಿತ್ಯ ನವೋದಯ, ಪ್ರಗತಿಶೀಲ, ನವ್ಯ, ದಲಿತ, ಬಂಡಾಯ, ಕಾವ್ಯ ಮಾರ್ಗಗಳಲ್ಲಿ ಬೆಳೆದು ಬರಲು ಸಾಧ್ಯವಾಗಿದೆ. ಕನ್ನಡ ಸಾಹಿತ್ಯ ಪರಂಪರೆಯಲ್ಲಿ ವೈವಿಧ್ಯಮಯ ಸಾಹಿತ್ಯ ಪ್ರಕಾರ ಬೆಳೆದುಬಂದಿದೆ. ಜನಪದ ಸಂಗ್ರಹ, ಸಂಪಾದನ ಕಾರ್ಯ, ಸಂಶೋಧನೆಗಳು ನಡೆದಿವೆ. ಕನ್ನಡ ಸಾಹಿತಿಗಳ ಸಾಧನೆಗಳು, ಅವರಿಗೆ ಸಂದ ಪ್ರಶಸ್ತಿಗಳು, ವಿವಿಧ ಅಕಾಡಮೆಗಳ ಪ್ರಶಸ್ತಿಗಳನ್ನು ಪಡೆದ ಸಾಹಿತಿ–ಕಲಾವಿದರ ಪರಂಪರೆ ಕನ್ನಡದ್ದಾಗಿದೆ. “ಸಾಹಿತ್ಯ ಕ್ಷೇತ್ರದಲ್ಲಿ ಮನವನ್ನು ಅರಳಿಸುವ ಸಾಹಿತ್ಯ, ಮನವನ್ನು ಕೆರಳಿಸುವ ಸಾಹಿತ್ಯವು ರಚಿತಗೊಳ್ಳುತ್ತಿದೆ. ಒಂದು ಮನುಷ್ಯರನ್ನು ಸುಸಂಸ್ಕೃತಗೊಳಿಸಿದರೇ, ಮತ್ತೊಂದು ಸಾಹಿತ್ಯ ಮಾನವನ ಹಿತಕ್ಕೆ ಧಕ್ಕೆಯೊದಗಿಸುತ್ತದೆ ಎಂಬುದು ನಿಸ್ಸಂದೇಹ” ಇಂದು ಜನಾಶ್ರಯವನ್ನು ಪಡೆದ ಸಾಹಿತ್ಯವು, ಶ್ರೀ ಸಾಮಾನ್ಯನ ಜೀವನ, ೧೨ನೆಯ ಶತಮಾನದಲ್ಲಿ ಹರಿಹರ ಕವಿಯೂ ಸಮಾಜದ ಕೆಳವರ್ಗಕ್ಕೆ ಸೇರಿದವರನ್ನು ತಮ್ಮ ಕಾವ್ಯದ ನಾಯಕರನ್ನಾಗಿ ಮಾಡಿಕೊಂಡು ಬಂಡಾಯದ ಬಾವುಟ ಹಾರಿಸಿರುವನೆಂಬುದನ್ನು ಗಮನಿಸಬೇಕು. ನ್ಯಾಯಾಂಗ, ಆಡಳಿತಾಂಗ ಹಾಗೂ ಶಿಕ್ಷಣಕ್ಷೇತ್ರಗಳಲ್ಲಿ ಕನ್ನಡ ಭಾಷೆಗೆ ಮನ್ನಣೆ ದೊರಕಬೇಕು. ಡಾ.ಕಮಲಾ ಹಂಪನ ಅವರು ‘ಭಾಷೆಯ ಸಂರಚನೆಯಲ್ಲಿ ತರಬಹುದಾದ ಸುಧಾರಣೆಯ ದಿಕ್ಕಿನತ್ತ ಹೊರಟವರು ಸಹಜ ಪ್ರಕ್ರಿಯೆಯಿಂದ ಕೂಡಿದ ವ್ಯತ್ಯಾಸಗಳನ್ನು ಚಿಂತಿಸುವಾಗ ಮೂಲ ಬೇರು, ಬುಡ ಒಣಗದಂತೆ, ಅದರ ಪಸಿಮೆ ಇರುವಂತೆ ನೋಡಿಕೊಳ್ಳುವುದೂ ಮುಖ್ಯವೆ. ಕನ್ನಡ ಭಾಷೆಯು ಯಾವತ್ತೂ ನಿಂತ ನೀರಾಗದೆ ಹರಿಯುವ ತೀರ್ಥವಾಗಿದೆ. ಕನ್ನಡ ಭಾಷೆಯಲ್ಲಿ ಇಂಗ್ಲೀಷ್, ಪ್ರಾಕೃತ ಮತ್ತು ಸಂಸ್ಕೃತ, ಅರಬ್ಬಿ, ಪಾರಸಿ ಭಾಷೆಗಳ ಪ್ರಭಾವವನ್ನು ಕನ್ನಡ ಅರಗಿಸಿಕೊಂಡಿದೆ. ಬದುಕಿನೊಂದಿಗೆ ಸಂಬಂಧ ಏರ್ಪಡಿಸಿಕೊಳ್ಳ ಬಯಸುವ ಸಾಹಿತ್ಯ ಸೃಷ್ಠಿಯು ಕೂಡ ಸೃಜನಶೀಲ ಸಂಘರ್ಷ ಇದು ಉಳಿದೆಲ್ಲ ಸಂಘರ್ಷಕ್ಕಿಂತ ಹೆಚ್ಚು ಅಪ್ಯಾಯಮಾನ ಮೋಹಕವೂ ಆಗಿರುತ್ತದೆ. ಇಂಥಹ ಮೋಹಕ ಗುಣ ಸಾಹಿತ್ಯಕ್ಕಿದೆ. ಅಖಂಡ ಕನ್ನಡ ಸಾಹಿತ್ಯವನ್ನು ಆಯಾ ಕಾಲಘಟ್ಟದ ಸೃಜನಶೀಲ ಸಂಘರ್ಷದ ಮೊತ್ತವಾಗಿಯೇ ಗ್ರಹಿಸುತ್ತೇನೆ. ಹಲ್ಮಿಡಿ ಶಾಸನ ಪೂರ್ವ ಘಟ್ಟದ ಚಿತ್ತಾಣ ಬೆಂದಡೆಯಂಥ ನಾಡವರ ನುಡಿಗಟ್ಟು ರೂಪಗಳಿಂದ ಹಿಡಿದು ಇವತ್ತಿನ ವರ್ತಮಾನದವರೆಗಿನ ನಿಶ್ಚಲ ಸಂಸ್ಕೃತಿ ಮತ್ತು ಚಲನಶೀಲ ಸಂಸ್ಕೃತಿಗಳ ಮಧ್ಯ ನಿರಂತರ ಮುಖಾಮುಖಿ ನಡೆದುಬಂದಿದೆ. ರಾಜ್ಯಸತ್ತೆ, ಧರ್ಮಸತ್ತೆಗಳ ಅಬ್ಬರದ ಧ್ವನಿಯ ಇದಿರು ಜನಸತ್ತೆ ಹೊಸ ಹೊಸ ಸಾಹಿತ್ಯ ರೂಪಗಳನ್ನು ಸೃಷ್ಠಿಸಿಕೊಳ್ಳುವಲ್ಲಿಯೇ ತನ್ನ ಇರುವಿಕೆಯನ್ನು ದಾಖಲಿಸುತ್ತ ಬಂದಿದೆ. ಸಾಹಿತ್ಯ ವಿಮರ್ಶಕರಿಗೆ ಹಿಡಿದಿಡಲು ಸಾಧ್ಯವಾಗದಂತೆ, ಕನ್ನಡ ಸಾಹಿತ್ಯದ ವಸ್ತು, ಭಾಷೆ, ರೀತಿ, ತತ್ವ ಮತ್ತು ದೃಷ್ಠಿ–ಧೋರಣೆಗಳು ಕಾಲದಿಂದ ಕಾಲಕ್ಕೆ ಅದೆಷ್ಟೋ ಪಲ್ಲಟಗಳಾಗಿ ಸಂಭವಿಸಿವೆ, ವೈವಿಧ್ಯತೆ, ವೈಶಿಷ್ಟ್ಯಗಳಿವೆ, ನವೋದಯ ಕಾಲದಿಂದಲೇ ಭಾವಗೀತೆ, ಕಥೆ, ಕಾದಂಬರಿ, ನಾಟಕ, ಲಲಿತ ಪ್ರಬಂಧ, ಪ್ರವಾಸಕಥನ ಮುಂತಾದ ಸಾಹಿತ್ಯ ರೂಪಗಳ ಸಮೃದ್ಧತೆ ಸುರುವಿಟ್ಟುಕೊಂಡಿತ್ತು. ಪ್ರಗತಿಶೀಲ, ನವ್ಯರ ಕಾಲದಲ್ಲಿ ಬರವಣಿಗೆಯ ವಸ್ತು, ದೃಷ್ಟಿ ಧೋರಣೆಗಳಲ್ಲಿ ಪಲ್ಲಟವಾಗಿದ್ದರೂ ಸಾಹಿತ್ಯರೂಪಗಳು ಹೆಚ್ಚು ಕಡಿಮೆ ಇವೇ ಮುಂಚೂಣಿಯಲ್ಲಿ ಇದ್ದವು. ದಲಿತ–ಬಂಡಾಯ ಕಾಲಘಟ್ಟದಲ್ಲಿ ಮಾತ್ರ ಸಾಹಿತ್ಯದ ಭಾಷೆ ಮತ್ತು ರೂಪಗಳೆರಡೂ ಹೋರಾಟಗಾರರ ಕೈಯಲ್ಲಿನ ಅಸ್ತ್ರದಂತಾದವು. “ಖಡ್ಗವಾಗಲಿ ಕಾವ್ಯ ಜನರ ನೋವಿಗೆ ಮಿಡಿಯುವ ಪ್ರಾಣಮಿತ್ರ” ಎಂಬಂಥ ಘೋಷ ವಾಕ್ಯಗಳು ಸಾಹಿತ್ಯಿಕ ಅಕೆಡೆಮಿಕ್ ಶಿಸ್ತಿನಾಚೆ ಪ್ರವಹಿಸ ತೊಡಗಿದವು.

**೪. ಶಿಕ್ಷಣ ಮತ್ತು ತಂತ್ರಜ್ಞಾನದ ಬಗೆಗೆ ಮಹಿಳಾ ಚಿಂತನೆ:**

**೪.೧ ಶಿಕ್ಷಣ:** ಶಿಕ್ಷಣದ ಸಾರ್ವತ್ರಿಕರಣ, ಶಾಲೆಗಳು ಮತ್ತು ವಿಶ್ವವಿದ್ಯಾಲಯಗಳು ಅಗತ್ಯತೆಯನ್ನು ಜಯದೇವಿತಾಯಿ ಲಿಗಾಡೆಯವರು ಹೇಳುತ್ತಾರೆ. ಅಕ್ಷರ, ಸಾಕ್ಷರತೆ ಬಗ್ಗೆ ಮಾತನಾಡಿದ್ದ ಲಿಗಾಡೆಯವರ ಭಾಷಣದ ಉಕ್ತಿಗಳು ಇಪ್ಪತ್ತಾರು ವರುಷದ ತರುವಾಯ ಫಲಿಸಿದೆ. ಹಲವಾರು ವಿಶ್ವವಿದ್ಯಾಲಯಗಳು, ಶಿಕ್ಷಣ ಸೌಲಭ್ಯಗಳು ದೊರೆತಿರುವ ಮಾಹಿತಿಯು ಶ್ರೀಮತಿ ಶಾಂತದೇವಿ ಮಾಳವಾಡರ ಭಾಷಣದಲ್ಲಿ ದೊರಕುತ್ತದೆ. ಅವರು ತಮ್ಮ ಭಾಷಣದಲ್ಲಿ ಇಂಗ್ಲೀಷ್ ಭಾಷೆಯ ವ್ಯಾಮೋಹ ನಗರದಿಂದ ಹಳ್ಳಿಯವರೆಗೆ ದಾಳಿಇಟ್ಟಿದೆ. ಕನ್ನಡದ ಮಕ್ಕಳು ಮಮ್ಮಿ–ಡ್ಯಾಡಿ ಸಂಸ್ಕೃತಿಯನ್ನು ಬಿಡುವುದು, ಕನ್ನಡಕ್ಕೆ ಎಲ್ಲ ರಂಗದಲ್ಲಿಯೂ ಪರಮೋಚ್ಚ ಸ್ಥಾನ ಸಿಗಬೇಕೆಂದಿದ್ದಾರೆ. ರಾಜ್ಯದ ಪ್ರಾಥಮಿಕ ಶಿಕ್ಷಣ ಮಾತೃಭಾಷೆಯಲ್ಲಿಯೇ ಆಗುವುದು. ಕನ್ನಡ ಶಾಲೆಗಳಿಗೆ ಉತ್ತೇಜನ ನೀಡುವುದು, ಆಂಗ್ಲ ಮಾಧ್ಯಮ ಶಾಲೆಗಳಲ್ಲಿ ಕನ್ನಡಪ್ರಥಮಭಾಷೆಯ ಕನಿಷ್ಠ ಒಂದು ತರಗತಿಯನ್ನಾದರೂ ಆರಂಭಿಸುವುದು ರಾಜ್ಯದ ಪದವಿ ಪೂರ್ವ ಶಿಕ್ಷಣ ಮಂಡಳಿಯು ಪಿ.ಯು.ಸಿ ಹಾಗೂ ಪದವಿ ಕಾಲೇಜುಗಳಲ್ಲಿ ಕನ್ನಡ ಐಚ್ಛಿಕ ವಿಷಯ ವ್ಯಾಸಂಗಕ್ಕೆ ಆದ್ಯತೆ ನೀಡುವುದು ಕರ್ನಾಟಕ ವಿಶ್ವವಿದ್ಯಾಲಯದಲ್ಲಿರುವಂತೆ ಬಿ.ಎ. ೨ನೇಯ ವರ್ಷದ ತರಗತಿಗಳಲ್ಲಿ ಕನ್ನಡ ಅವಶ್ಯಕ ಪತ್ರಿಕೆಯನ್ನು ಇನ್ನುಳಿದ ವಿಶ್ವವಿದ್ಯಾಲಯಗಳಲ್ಲಿ ಆರಂಭಿಸುವುದು. ಬಿ.ಇಡಿ ಸಾಮಾನ್ಯ ಪ್ರವೇಶ ಪರೀಕ್ಷೆಯಲ್ಲಿ ಕನ್ನಡ ಐಚ್ಛಿಕ ವಿಷಯವನ್ನು

ಅಳವಡಿಸಿ ಪರೀಕ್ಷೆ ನಡೆಸುವುದು. ಕನ್ನಡ ಮಾಧ್ಯಮದಲ್ಲಿ ತೇರ್ಗಡೆಗೊಂಡ ವಿದ್ಯಾರ್ಥಿ–ವಿದ್ಯಾರ್ಥಿನಿಯರಿಗೆ ತಾಂತ್ರಿಕ ಮತ್ತು ವೈದ್ಯಕೀಯ ಹಾಗೂ ವೃತ್ತಿ ಶಿಕ್ಷಣ ವ್ಯಾಸಂಗಗಳಲ್ಲಿ ಸ್ಥಾನವನ್ನು ಮೀಸಲಾಗಿರಿಸುವುದು, ಕನ್ನಡ ಶಿಕ್ಷಕರ ನೇಮಕಾತಿ, ಕಿತ್ತೂರ ಚೆನ್ನಮ್ಮ ಮಹಿಳಾ ವಸತಿಶಾಲೆಯನ್ನು ಬೆಳಸಿ ಮಹಿಳಾ ವಿಶ್ವವಿದ್ಯಾಲಯವಾಗಿಸುವುದು ಎಂಬ ನಿರ್ಣಯಕ್ಕೆ ೨೦೦೩ರಂದು ಸರ್ಕಾರವು ಮಹಿಳಾ ವಿಶ್ವವಿದ್ಯಾಲಯ ಆರಂಭಿಸಿರುವುದು ಅಭಿನಂದನಾರ್ಹವಾದುದು. ಬಹುತಾಂತ್ರಿಕ, ಆಧುನೀಕರಣ ಮತ್ತು ಜಾಗತೀಕರಣದ ತುಡಿತದಿಂದಾಗಿ ಪ್ರಾದೇಶಿಕ ಭಾಷೆಯ ಯುವ ಪ್ರತಿಭೆಗಳು ಮಾತೃಭಾಷೆಯನ್ನು ತೆಗೆದು ಇ–ಶಿಕ್ಷಣದ ಕಡೆ ಪಲಾಯನ ಮಾಡುತ್ತಿದ್ದಾರೆ ಎಂದು ಡಾ. ಕಮಲಾ ಹಂಪನಾ ಅವರು ಅಭಿಪ್ರಾಯ ಪಡುತ್ತಾರೆ. “ನಮ್ಮ ಶಿಕ್ಷಣ ವ್ಯವಸ್ಥೆ ಮತ್ತು ಕನ್ನಡ ಮಾಧ್ಯಮದ ನೀತಿ ಇವೆರಡನ್ನೂ ಕುರಿತು ಮಾತನಾಡುವುದೇ ವ್ಯಥಾಲಾಪ ಎಂಬಂತಾಗಿದೆ. ಏಕೆಂದರೆ ಸಂಪೂರ್ಣ ಶಿಕ್ಷಣ ವ್ಯವಸ್ಥೆಯೇ ಖಾಸಗಿಯವರ ಪರಭಾರೆಯಾಗಿ ವರ್ಷಗಳೇ ಸಂದಿದೆ. ನಮ್ಮ ಪ್ರಭುತ್ವ ಆದರ್ಶವೆನಿಸುವಂತಹ ಹೇಳಿಕೆಗಳನ್ನು ಕೊಡುತ್ತಲೆ ಇರುವುದು ರೇಜಿಗೆ ಬರಿಸುತ್ತದೆ.” ಎಂಬುದು ವಾಸ್ತವದ ಪ್ರತಿರೂಪ. ಮಹಿಳಾ ಚಿಂತಕಿಯರು ತಂತ್ರಜ್ಞಾನ ಬಗ್ಗೆ ಚಿಂತಿಸಿರುವ ಪರಿಯನ್ನು ಗಮನಿಸೋಣ.

**೪.೨ ತಂತ್ರಜ್ಞಾನ :–** ಕರ್ನಾಟಕದಲ್ಲಿರುವ ಪರಿಣಿತ ತಂತ್ರಜ್ಞರು, ವೈದ್ಯರು, ವೃತ್ತಿಪರ ಸಂಸ್ಥೆಯ ಪರಿಣಿತರು, ವಿಜ್ಞಾನಿಗಳು, ಕಂಪ್ಯೂಟರ್ ತಜ್ಞರು ಕನ್ನಡ ಮಾಧ್ಯಮದಲ್ಲಿ ಉಪಯುಕ್ತವಾದ ಸಾಹಿತ್ಯ ರಚಿಸುವುದು, ಸರಕಾರ ಅಂಥ ಪ್ರಕಟಣೆಗಳಿಗೆ ಅನುದಾನ ನೀಡುವುದು, ಕಂಪ್ಯೂಟರ್ ಕ್ಷೇತ್ರದಲ್ಲಿ ರಾಷ್ಟ್ರಮಟ್ಟದ ಸಾಧನೆ ಮಾಡಿದ ಕರ್ನಾಟಕವು ಮಾಹಿತಿ ತಂತ್ರಜ್ಞಾನ ಹಾಗೂ ಕನ್ನಡ ಗಣಕಯಂತ್ರವನ್ನು ಸರ್ಕಾರ ಮತ್ತು ಸಾರ್ವಜನಿಕ ಸಂಸ್ಥೆಗಳು ರಾಜ್ಯದ ಎಲ್ಲಾ ಭಾಗಗಳಲ್ಲಿ ಬಳಕೆ ತರುವುದು ಎಂದು ಇಂದು ತಂತ್ರಜ್ಞಾನ ಹಾಗೂ ಮಾಹಿತಿತಂತ್ರಜ್ಞಾನ ಮನುಷ್ಯ ಲೋಕವನ್ನು ತಬ್ಬಿದೆ. ಈ ವಿದ್ಯುನ್ಮಾನ– ಟೆಕ್ನಾಲಜಿಯೆಂಬ ಬಾಹುಬಂಧನ ಧೃತರಾಷ್ಟ್ರ ಆಲಿಂಗನ ಆಗದಂತೆ ಎಚ್ಚರ ವಹಿಸುವುದು, ಪುಸ್ತಕ ಸಂಸ್ಕೃತಿ ಮತ್ತು ಮನುಷ್ಯ ಸಂಬಂಧವನ್ನು ಅಳಿಸಿ ಹಾಕಲು ಬಿಡಬಾರದು. ಮಾಹಿತಿ ತಂತ್ರಜ್ಞಾನದ ಓಘದಲ್ಲಿ ಕನ್ನಡದ ತಂತ್ರಾಂಶ ಸೊರಗದಂತೆ ವರ್ತಿಸೋಣ, ಕಂಪ್ಯೂಟರ್ ವಿದ್ಯುನ್ಮಾನದತ್ತವಾದ ದೂರದರ್ಶನ, ವಿಡಿಯೋ ಆಟಗಳು ಕನ್ನಡ ಭಾಷೆಗೆ ಪೂರಕವೊ, ಮಾರಕವೊ ಎಂಬ ವಾಗ್ವಾದ ನಡೆದಿದೆ. ತಂತ್ರಜ್ಞಾನ ಅನನ್ಯ ಚೈತನ್ಯ, ಇದು ಹೊಸಕಾಲದ ಅನಿವಾರ್ಯತೆ. ಅದನ್ನು ಪಳಗಿಸಿ, ದುಡಿಸಿ ನಾಡು ಅಭಿವೃದ್ಧಿ ಹೊಂದುವುದು. ಜಾಗತೀಕರಣ ತಂತ್ರಜ್ಞಾನ ಹಾಗೂ ಮಾಹಿತಿ ತಂತ್ರಜ್ಞಾನದಿಂದ ಎಲ್ಲಾ ಸಮಸ್ಯೆಗಳೂ ಕರಗಿ ಹೋಗಿ ಬಾಳು ಸುಗಮಗೊಳ್ಳುತ್ತದೆ ಎಂಬುದು ಭ್ರಮೆಯೆನಿಸಿದರೂ ಅದು ಬೊಗಳೆಯಲ್ಲ, ನಮ್ಮ ಲೇಖಣಿಯ ಹರಿತವನ್ನು ಹೈಟೆಕ್ ವಿದ್ಯುನ್ಮಾನವೆಂದು ಮೊಂಡು ಮಾಡದಂತೆ ನೋಡಿಕೊಳ್ಳುವ ಜವಾಬ್ದಾರಿ ಲೇಖಕರಿಗಿದೆ. ಜಾಗತಿಕ ಪ್ರಜ್ಞೆಗೆ ಸಮಾನಾಂತರವಾಗಿ ಕನ್ನಡ ತನ್ನ ಧಾರಣಶಕ್ತಿಗೆ ಸಜ್ಜಾಗದೆ ಗತ್ಯಂತರವಿಲ್ಲ “ಇದು ವೈಜ್ಞಾನಿಕ ಯುಗ, ಹೈಟೆಕ್ ಕಾಲ, ಕೈಗಾರಿಕಾದಿ ಉದ್ಯಮಗಳಿಗೆ, ಗಣಕಯಂತ್ರಗಳಿಗೆ, ತಂತ್ರಾಂಶಗಳಿಗೆ, ಕಂಪ್ಯೂಟರ್‌ಗಳಿಗೆ ಆದ್ಯತೆ. ಸಾಹಿತ್ಯಕ್ಕೆ ಅಗತ್ಯ ಇದೆಯೆ” ಎಂಬ ಪ್ರಶ್ನೆ ಎದ್ದಿದೆ. ಸಾಹಿತ್ಯವು, ತಂತ್ರಜ್ಞಾನಕಲಿಕೆಗೆ ಸಶಕ್ತವಾಗಿದೆ ಎಂದು ಜಗತ್ತಿಗೆ ತೋರಿಸಬೇಕಾಗಿದೆ. ಕನ್ನಡ ಜಗತ್ತಿಗೆ ತಂತ್ರಜ್ಞಾನದ ಪ್ರವೇಶ ಸ್ವಾಗತಾರ್ಹ, ತಂತ್ರಜ್ಞಾನವನ್ನು ಒಂದು ಭಾಷೆಗೆ ತರುವಾಗ ತಂತ್ರಜ್ಞಾನದ ಸಲಕರಣೆಗಳ ನಿರ್ಮಾಣ, ಆಯಾ ಭಾಷೆಯ ಜಾಯಮಾನ ಮತ್ತು ಸಾಂಸ್ಕೃತಿಕ ವಿನ್ಯಾಸಕ್ಕೆ ಧಕ್ಕೆಯಾಗದಂತೆ ನಿರ್ಮಿಸುವುದು ಚಾಕ್ಷುಷ ಅಕ್ಷರ ಗುರುತಿಸುವಿಕೆ (ಒಸಿಆರ್) ತಂತ್ರಾಂಶದ ನಿರ್ಮಾಣ, ಪಠ್ಯದಿಂದ ವಾಕ್ ಮತ್ತು ವಾಕ್‌ನಿಂದ ಪಠ್ಯ (ಟಿಟಿಎಸ್, ಎಸ್‌ಟಿಟಿ), ಸ್ವಯಂ ವಾಕ್ ಜ್ಞಾನ (ಎ.ಎಸ್.ಆರ್) ಯಂತ್ರ ಭಾಷಾಂತರವೂ ಸ್ವಾಗತಾರ್ಹವಾದರೂ ಒಂದು ಭಾಷೆಯಿಂದ ಮತ್ತೊಂದು ಭಾಷೆಗೆ ಯಂತ್ರಮುಖೇನ ಪ್ರವಹಣಗೊಳ್ಳುವುದರಿಂದ ಭಾಷೆಯ ಕಣಕಣವನ್ನೂ ಪರಿಗಣಿಸಿ ಭಾಷೆಗೆ ಧಕ್ಕೆಯಾಗದಂತೆ ಕಾರ್ಯ ನಿರ್ವಹಿಸುವುದು ಕನ್ನಡ ಭಾಷೆಗೊಂದು ಪ್ರತ್ಯೇಕ ವಿದ್ಯುನ್ಮಾನ ಅಂಚೆಯ (ಗಒಖಅಔಆಇ) ಉಪಯೋಗ ಲಭ್ಯವಾಗಬೇಕು. ವಿದ್ಯುನ್ಮಾನ ನಿಘಂಟುಗಳ ನಿರ್ಮಾಣ, ಕೃತಿಗಳ ಅವತರಣಿಕೆಯೂ ಆಗಬೇಕು. ನಿಘಂಟುಗಳು ಏಕಭಾಷಾ ಆಗಿರದೆ ದ್ವಿಭಾಷಾ, ತ್ರಿಭಾಷಾ, ಬಹುಭಾಷಾ ನಿಘಂಟುಗಳಾಗಿರಬೇಕು. ಭಾಷಾ ಸಾಹಿತ್ಯ ಕರ್ನಾಟಕ ದಾಟಿ ಹೊರನಾಡುಗಳಲ್ಲಿಯೂ ದಾಂಗುಡಿಯಿಡುತ್ತದೆ. ಇನ್ನೂ ಮುಂದೆ ಕರ್ನಾಟಕ ಪಸರಿಸುವ ಪರಿ ಇದಾದೀತು ಎಂದು ಡಾ. ಕಮಲಾ ಹಂಪನಾ ಅವರು ಅಭಿಪ್ರಾಯ ಪಡುತ್ತಾರೆ. ಕಾಲ, ಸ್ಥಳ, ಪರಿಸರದ ನಿರ್ಬಂಧಗಳನ್ನು ಸೀಮೋಲ್ಲಂಘನ ಮಾಡಿ ಮಾಹಿತಿಯು ವಿಶ್ವಾದ್ಯಂತ ಲಭ್ಯವಾಗುತ್ತಿದೆ. ಆದುದರಿಂದ ಮಾಹಿತಿ ತಂತ್ರಜ್ಞಾನ ಸಲಕರಣೆಗಳನ್ನು ಅಳವಡಿಸುವಾಗ ಕಾಳಜಿವಹಿಸಬೇಕಾದ ಗುರುತರವಾದ ಹೊಣೆಯಿದೆ. ಡಾ.ಗೀತಾ ನಾಗಭೂಷಣ ಅವರು ಮಾತನಾಡುತ್ತಾ “ಮಾಹಿತಿ ತಂತ್ರಜ್ಞಾನದ ಜಾಲ ವಿಶ್ವವನ್ನು ಹಳ್ಳಿಯಾಗಿ ನಿರ್ಮಿಸುತ್ತಿದೆ, ಇದು ‘ಬ್ಲಾಗು’ಗಳ ಯುಗ, ಕೆಂಡಸಂಪಿಗೆ, ಅವಧಿ, ಪುಸ್ತಕ ಪ್ರೀತಿ, ಅಂತರಂಗ, ಬುಕ್ ಮಾರ್ಕ್, ಅನುಭವ ಮಂಟಪ, ಅನವರತ ಮತ್ತು ಅಭಿವ್ಯಕ್ತಿ ಬ್ಲಾಗುಗಳು, ವಿವಿಧ ವೆಬ್‌ಸೈಟ್‌ಗಳಲ್ಲಿ ಬರುತ್ತಿರುವ ಬರಹಗಳ ಮೊನಚು, ಆಪ್ತತೆ ಎಂಥವರನ್ನೂ ದಂಗುಬಡಿಸದೆ ಇರಲಾರದು. ಕಂಪ್ಯೂಟರಿಗೆ ಆಶ್ರಯಿಸಿಕೊಂಡಿರುವ ಹೈಟೆಕ್ ಸಿಟಿಯ ವಿದ್ಯಾವಂತರಿಗೆ ಖಾಸಗಿಯಲ್ಲದ ಈ ಖಾಸಗಿ ಓದು ಸಾಫ್ಟ್‌ವೇರ್ ಜಗತ್ತಿಗೆ ಅನಿವಾರ್ಯವಾದುದು.

**ಉಪಸಂಹಾರ:** ಕನ್ನಡ ಸಾಹಿತ್ಯ ಸಮ್ಮೇಳನಗಳಲ್ಲಿ – ಮಹಿಳಾ ಚಿಂತಕಿಯರು, ಮಹಿಳಾ ಸಂವೇದನೆಯ ಸುತ್ತ ಮುತ್ತಲ ತಮ್ಮ ಪರಿಭಾವನೆ, ಕನ್ನಡ–ಕನ್ನಡಿಗ–ಕರ್ನಾಟಕದ ಚಿಂತನೆ, ಕನ್ನಡ ಭಾಷೆ ಮತ್ತು ಸಾಹಿತ್ಯ, ಶಿಕ್ಷಣ ಮತ್ತು ತಂತ್ರಜ್ಞಾನದ ಬಗೆಗೆ ವಿಭಿನ್ನ ರೀತಿಯ ಚಿಂತನೆಗಳನ್ನು ಆಯಾ ಕಾಲಘಟ್ಟಕ್ಕನುಗುಣವಾಗಿ ತಮ್ಮ ಭಾಷಣಗಳಲ್ಲಿ ಅಭಿವ್ಯಕ್ತಿಸಿರುವ ಪರಿ, ಮುಂದಾಲೋಚನೆಯ ಪ್ರವೃತ್ತಿ, ಅನುಭವದಾಳದ ಚಿಂತನೆಗಳು ನಿಜಕ್ಕೂ ಸ್ಮರಣೀಯವಾದುದು. ಇಂದು–ಮುಂದು–ಎಂದೆಂದು ಮಹಿಳಾ ಚಿಂತನೆಗಳು ಸತ್ಯಯುತವಾದುದು, ಸತ್ವಯುತವಾದುದು.

**ಪರಾಮರ್ಶನ ಗ್ರಂಥಗಳು : –**


೧) ಕನ್ನಡ ಸಾಹಿತ್ಯ ಸಮ್ಮೇಳನಗಳ ಅಧ್ಯಕ್ಷರ ಭಾಷಣಗಳು – ಸಂಪುಟ–೭ ಸಂಪಾದಕರು, ಪ್ರೊ.ಜಿ. ಅಶ್ವತ್ಥನಾರಾಯಣ, ಪು.ಸಂ. ೧೮೩ ರಿಂದ ೧೯೧, ಕನ್ನಡ ಸಾಹಿತ್ಯ ಪರಿಷತ್ತು – ೨೦೧೬.

೨) ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರ ಭಾಷಣಗಳು, ಸಂಪುಟ–೬ ಸಂಪಾದಕರು, ಧರ್ಮದರ್ಶಿ ಹರಿಕೃಷ್ಣ ಪುನರೂರು, ಪು.ಸಂ. ೯೩ ರಿಂದ ೧೧೦, ೧೯೩ ರಿಂದ ೨೨೯, ಕನ್ನಡ ಸಾಹಿತ್ಯ ಪರಿಷತ್ತು–೨೦೦೩

೩) ಕನ್ನಡ ಸಾಹಿತ್ಯ ಸಮ್ಮೇಳನಗಳ ಅಧ್ಯಕ್ಷರ ಭಾಷಣಗಳು – ಸಂಪುಟ–೪, ಸಂಪಾದಕರು, ಪ್ರೊ. ಹಂಪ, ನಾಗರಾಜಯ್ಯ ಪು.ಸಂ.೧–೧೯, ಕನ್ನಡ ಸಾಹಿತ್ಯ ಪರಿಷತ್ತು– ೧೯೮೫.